† ಶ್ರೀ ಎಂ. ನಾಗಪ್ಪ (ರಾಯಚೂರು).—ಮಾನ್ಯ ಅಧ್ಯಕ್ಷರೇ: ಈ ದಿವಸ ಮಾನ್ಯ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರತಕ್ಕ ಮಸೂದೆಯನ್ನು ನಾವು ಕೂಲಂಕಷವಾಗಿ ವಿಚಾರ ಮಾಡಿ ನೋಡಿದ್ದೇ ಆದರೆ, ಮೊಟ್ಟಮೊದಲನೆಯದಾಗಿ ನಾವು ಅದು ಈ ಸಭೆಯ ಅಧಿಕಾರಕ್ಕೆ ಒಳಪಟ್ಟಿದೆಯೇ ಅನ್ನುವುದು ಮೊದಲನೆಯ ಪ್ರಶ್ನೆ. ಅದಕ್ಕೆ ಮುಖ್ಯ ಕಾರಣ ಎಂದರೆ ಈ ದಿವಸ ನಮ್ಮ ಭಾರತದಲ್ಲಿರತಕ್ಕ ಘಟನಾವಳಿಯ ಪ್ರಕಾರ ಈ ವಿಷಯ ರಾಜ್ಯ ಸರ್ಕಾರದ ಕಾಯಿದೆಯೊಳಗೆ ಬರುತ್ತದೆಯೇ ಅಥವಾ ಕೇಂದ್ರ ಸರ್ಕಾರದ ಕಾಯಿದೆಯೊಳಗೆ ಬರುತ್ತದೆಯೇ ಅಥವಾ ಎರಡಕ್ಕೂ ಅನ್ವಯಿಸತಕ್ಕ ಕನ್‌ಕರೆಂಟ್ ಲಿಸ್ಟಿನಲ್ಲಿ ಬರುತ್ತದೆಯೇ ಎಂಬುದನ್ನು ನೋಡಬೇಕಾಗಿದೆ. ಇದು ಕನ್‌ಕರೆಂಟ್ ಲಿಸ್ಟಿನಲ್ಲಿ ಬರುತ್ತದೆ ಎನ್ನುವುದಾದರೆ ಆಗ ನಾವು ಏನು ಕಾರ್ಯಕ್ರಮ ಕೈಗೊಳ್ಳಬೇಕು, ಅದನ್ನು ನಾವು ಯಾವ ದೃಷ್ಟಿಯಿಂದ ನೋಡಬೇಕು ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಆದರೆ ನಾನು ಇದೇ ಸಂದರ್ಭದಲ್ಲಿ ಅಧ್ಯಕ್ಷರ ಗಮನಕ್ಕೆ 265ನೇ ಆರ್ಟಿಕಲ್‌ನ್ನು ತರುತ್ತೇನೆ, ಅದರ ಜೊತೆಗೆ ಲಿಸ್ಟ್ ಎರಡರಲ್ಲಿ ಯಾವ ಒಂದು ಪಟ್ಟಿಯನ್ನು ಕೊಡಲಾಗಿದೆಯೋ ಅದರಲ್ಲಿ ತೋರಿಸಿರತಕ್ಕ ವಿಷಯಗಳಲ್ಲಿ ಮಾತ್ರ ಕಾಯಿದೆ ಮಾಡಲು ನಮಗೆ ಅಧಿಕಾರವಿದೆ. ಆ ಪಟ್ಟಿಯಲ್ಲಿ 5ನೇ ನಂಬರಿನಲ್ಲಿ ಅಡಕವಾಗಿರತಕ್ಕ ವಿಷಯವನ್ನು ನೋಡುವುದಾದರೆ ಅಲ್ಲಿ ಹೀಗೆ ಹೇಳಿದೆ :—

> "Local Government, that is to say, the constitution and powers of Municipal Corporations, Improvement Trusts, District Boards, Mining Settlement authorities and other local authorities for the purposes of Local Self Government or village administration."

ಇಲ್ಲಿ ಬಹುತೇಕ ಇದರ ಬಲದಿಂದ ಮಾನ್ಯ ಮಂತ್ರಿಗಳು ಇದು ಇಂಪ್ರೂವ್‌ಮೆಂಟ್ ಟ್ರಸ್ಟಿನಲ್ಲಿ ಬರುತ್ತದೆ ಎಂದು ಭಾವಿಸಿದ್ದಂತೆ ಕಂಡುಬರುತ್ತದೆ. ಆದರೆ ಅಂಥಾ ಅಧಿಕಾರವನ್ನು ವಹಿಸಿಕೊಟ್ಟಿರತಕ್ಕ ಕೆಲವು ಪದ್ಧತಿಗಳೇನಿವೆ ಅವುಗಳನ್ನು ನೋಡುವುದಾದರೆ ಇದು ಅದರ ಕಕ್ಷೆಯಲ್ಲಿ ಬರುವುದಿಲ್ಲ ಎಂದು ಕಂಡು ಬಂದಾಗ ಅದನ್ನು ನಾವು ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ಆದರೆ ನನಗೆ ಇಲ್ಲಿ ಒಂದು ಬಹಳ ವಿಷಾದಪಡತಕ್ಕ ಸಂದರ್ಭವುಂಟಾಗಿದೆ. ಅದಕ್ಕೆ ದಯವಿಟ್ಟು ಸರ್ಕಾರ

ದವರು ಗಮನಕೊಡಬೇಕೆಂದು ಹೇಳುತ್ತೇನೆ. ನಾವು ಇಲ್ಲಿ ಪಾಸ್‌ಮಾಡತಕ್ಕ ಕಾಯಿದೆಗಳಲ್ಲಿ ಬಹು ಭಾಗ ಹಿಂದಕ್ಕೆ ಬರುತ್ತಿವೆ. ಹೈಕೋರ್ಟಿನಲ್ಲಿ ಟೀಕೆಗೆ ಒಳಗಾಗುತ್ತಿವೆ. ಅನೇಕ ತಿದ್ದುಪಡಿಗಳನ್ನು ಮಾಡಲು ಮತ್ತೆ ಮತ್ತೆ ಇಲ್ಲಿಗೆ ಬರುತ್ತಿವೆ. ಇದಕ್ಕೆಲ್ಲಾ ಮೂಲ ಕಾರಣ ನಾವು ಇಲ್ಲಿ ನಮ್ಮ ಶಾಸನಗಳನ್ನು ವಿವೇಚನೆಯಿಂದ ಮಾಡತಕ್ಕ ಕಾಲದಲ್ಲಿ ವಿಚಾರಮಾಡಿ ಮಾಡುತ್ತಿಲ್ಲ ಎಂಬುದನ್ನು ಅದು ಎತ್ತಿ ತೋರಿಸುತ್ತಿದೆ. ಈ ವಿಚಾರಕ್ಕೆ ಸರ್ಕಾರದವರು ಮುಖ್ಯ ಗಮನಕೊಡಬೇಕು.

ಇನ್ನು ಎರಡನೆಯದಾಗಿ, ಆರ್ಟಿಕಲ್ 31 ನೋಡುವುದಾದರೆ ಅದರ ಪ್ರಕಾರ ಟ್ರಸ್ಟ್ ಬೋರ್ಡಿಗೆ ಕೆಲವು ಅಧಿಕಾರಗಳನ್ನು ಕೊಟ್ಟಿದ್ದಾರೆ. ಜಮೀನುಗಳನ್ನು ಅಕ್ವಯಿರ್ ಮಾಡತಕ್ಕ ವಿಚಾರದಲ್ಲಿ ಕೇಂದ್ರ ಸರ್ಕಾರದಲ್ಲಿ ಒಂದು ಆಕ್ಟ್ ಉಂಟು. ಆ ಕೇಂದ್ರದ ಆಕ್ಟಿನಲ್ಲಿರತಕ್ಕ ಅಂದರೆ ಆ ಕಾಯಿದೆಯಲ್ಲಿರತಕ್ಕ ಸೆಕ್ಷನ್ 4, 5, ಮತ್ತು 6 ನೇಕಲಂಗಳ ಪ್ರಕಾರ ಭೂಮಿಯನ್ನು ಅಕ್ವಯಿರ್‌ಮಾಡತಕ್ಕ ಸಂದರ್ಭದಲ್ಲಿ ನೋಟಿಫಿಕೇಷನ್ ಹೊರಡಿಸಬೇಕು ಎಂದು ಇದೆ. ಆದರೆ ನಮ್ಮಲ್ಲಿ ಒಂದು ಭೂಮಿಯನ್ನು ಅಕ್ವಯರ್ ಮಾಡಬೇಕಾದರೆ ನಾವು ಇಲ್ಲಿ ಹೊರಡಿಸಬೇಕಾದ ನೋಟಿಫಿಕೇಷನನ್ನು ಅದೇ ಕೇಂದ್ರದ ಕಾಯಿದೆಯಲ್ಲಿರತಕ್ಕ ಆ ಮೂರು ಕಲಂಗಳನ್ನೇ ನಮ್ಮ ಕಾಯಿದೆಯಲ್ಲಿ ಸೆಕ್ಷನ್ 16 ಮತ್ತು 18 ಎಂತ ನಮೂದಿಸಿ ನೋಟಿಫಿಕೇಷನ್ ಹೊರಡಿಸಬೇಕಾಗಿದೆ. ಇದೇ ಸಂದರ್ಭದಲ್ಲಿ ನಾವು ನಮ್ಮ ಆರ್ಟಿಕಲ್ 254ನ್ನು ನೋಡಬೇಕು. ನಾವು ಇಲ್ಲಿ ಮಾಡತಕ್ಕ ಶಾಸನಗಳು ಕನ್‌ಕರೆಂಟ್ ಲಿಸ್ಟಿನಲ್ಲಿರತಕ್ಕ ಸಬ್‌ಜೆಕ್ಟ್‌ಗಳನ್ನು ಬಾಧಕಪಡಿಸದಂತೆ ಮಾಡಬೇಕಾಗಿದೆ. ನಾವು ಇಲ್ಲಿ ಏನೇ ಪ್ರಾವಿಜನ್ ಮಾಡಿದರೂ ಅದು ವಾಯಿಡ್ ಆಗಬಾರದು. ಅದಕ್ಕೆ ಸರ್ಕಾರದವರು ಸಾಕಷ್ಟು ಗಮನ ಕೊಡಬೇಕು. ಆದರೆ ನಾವು ಇಲ್ಲಿ ಲ್ಯಾಂಡ್ ಅಕ್ವಿಜಿಷನ್ ಬಗ್ಗೆ ಏನು ಕಾಯಿದೆಗಳನ್ನು ಮಾಡಿದ್ದೇವೆ ಅದಕ್ಕೂ ಮತ್ತು ಕೇಂದ್ರದವರು ಮಾಡಿರತಕ್ಕ ಲ್ಯಾಂಡ್ ಅಕ್ವಿಜಿಷನ್ ಕಾಯಿದೆಗೂ ಅನೇಕ ಕಡೆ ಹೊಂದಾವಣಿಕೆಗಳು ಆಗುತ್ತಿಲ್ಲ.

ಇನ್ನು ಮೂರನೆಯದಾಗಿ—ಈ ದಿವಸ ರಾಜ್ಯದಲ್ಲಿ ಆಡಳಿತ ನಡೆಯುತ್ತಿರುವುದು ಪ್ರಜಾಸತ್ತಾತ್ಮಕ ಸರ್ಕಾರದ ತಳಹದಿಯ ಮೇಲೆ. ಆದರೆ ಈಗತಾನೆ ಮಾನ್ಯ ಮಂತ್ರಿಗಳು ಒಂದು ವಿಚಾರವನ್ನು ತಿಳಿಸಿದರು. ಅದೇನೆಂದರೆ 1903ನೇ ಆಕ್ಟ್ ಪ್ರಕಾರ ನಮ್ಮ ಟ್ರಸ್ಟ್ ಬೋರ್ಡಿಗೆ ಕೆಲವು ಏಕಚಕ್ರಾಧಿಪತ್ಯ ನಡೆಸತಕ್ಕ ಕಲಂಗಳನ್ನು ಅಳವಡಿಸಿದ್ದೇವೆಂದು ಹೇಳಿದ್ದು ವಿಷಾದನೀಯ.

Sri K. PUTTASWAMY.—Sir, I think the Hon'ble Member is making a wrong reference. What I said was that though the Act was passed in 1903, the provisions of the Act are good even to-day in the light of the constitutional provisions.

ಶ್ರೀ ಎಂ. ನಾಗಪ್ಪ.—ಈಗ ನಾನು ಹೇಳುತ್ತಿರುವುದು ಏನೆಂದರೆ ಈ ದಿವಸ ನಮ್ಮ ಮಂತ್ರಿಗಳು ರಾಜ್ಯದಲ್ಲಿ ಪ್ರಜಾರಾಜ್ಯಮಾಡುವುದಕ್ಕೆ ಹೊರಟಿದ್ದೇವೆಂದು ಹೇಳುತ್ತಿರುವುದರಿಂದ ಅವರ ಗಮನಕ್ಕೆ ಒಂದು ವಿಚಾರವನ್ನು ತರಬಯಸುತ್ತೇನೆ. ಪ್ರಜಾರಾಜ್ಯ ಬರುವುದಕ್ಕೆ ಮೊದಲು ಇಲ್ಲಿ ಏನು ಒಂದು ವಾತಾವರಣವಿತ್ತು, ಅನಂತರ ಇಲ್ಲಿ ಪ್ರಜಾರಾಜ್ಯ ಬಂದಮೇಲೆ ಅದು ಯಾವ ರೀತಿ ಬದಲಾವಣೆ ಆಗಿದೆ ಎಂಬುದನ್ನು ಆಲೋಚಿಸಿದರೆ ಮುನಿಸಿಪಾಲಿಟಿಗೆ ಒಂದು ಸ್ಟ್ಯಾಟ್ಯೂಟರಿ ಶಾಸನದ ಪ್ರಕಾರ ಚುನಾವಣೆ ಆಗಿ ಬಂದ ಅಧ್ಯಕ್ಷರಿಗೆ ಮತ್ತು ಆ ಸದಸ್ಯರಿಗೆ ಏನು ಅಧಿಕಾರಗಳನ್ನು ಕೊಟ್ಟಿದ್ದಾರೆ ಮತ್ತು ಆ ಸಂಸ್ಥೆಗಳನ್ನು ಸೂಪರ್‌ಸೀಡ್ ಮಾಡಿ ಅಲ್ಲಿಗೆ ನೇಮಕ ಮಾಡಿರತಕ್ಕ ಅಧಿಕಾರಿಗಳಿಗೇನು ಅಧಿಕಾರಗಳನ್ನು ಕೊಟ್ಟಿದ್ದಾರೆಂಬುದನ್ನು ತುಲನ ಮಾಡಿ ನೋಡಿದರೆ ಆರಿಸಿ ಬಂದಂಥ ಜನರಿಗೆ ಏನು ಅಧಿಕಾರಗಳನ್ನು ಕೊಡಲಾಗಿದೆಯೋ ಅದಕ್ಕೂ ಹೆಚ್ಚಿನ ಅಧಿಕಾರಗಳನ್ನು ನೇಮಕ ಮಾಡಿದ ಅಧಿಕಾರಿಗಳಿಗೆ ಕೊಟ್ಟಿದ್ದಾರೆ. ಒಂದು ಕಡೆ ಅಧಿಕಾರಗಳನ್ನು ವಿಕೇಂದ್ರೀಕರಣ ಮಾಡಬೇಕು ಎಂದು ಹೇಳುತ್ತಾ ಇನ್ನೊಂದು ಕಡೆ ಅದನ್ನು ಕೇಂದ್ರೀಕರಣ ಮಾಡುತ್ತಿದ್ದಾರೆ. ಹೀಗಾಗಿ ಆ ಜಿಲ್ಲಾ ಬೋರ್ಡುಗಳನ್ನು ಇತಿಶ್ರೀ ಮಾಡಿದರು. ಇಂಥವರಿಗೆ ಪ್ರಜಾ ಸರ್ಕಾರದಲ್ಲಿ ಒಂದು ನಂಬಿಕೆ ಇನ್ನುವುದಿದೆಯೇ? ಇಲ್ಲಿ ಪ್ರಜಾಪ್ರಭುತ್ವವನ್ನು ಶಾಶ್ವತವಾಗಿ ಇವರು ಉಳಿಸಿಕೊಂಡು ಬರುತ್ತಾರೆಯೇ ಎಂಬತಕ್ಕ ನಂಬಿಕೆ ನನಗಂತೂ ಇಲ್ಲ. ಇವರು ಇದೆಲ್ಲವನ್ನೂ ಕೇವಲ ತಮ್ಮ ಒಂದು ಪಾರ್ಟಿಯ ಅನುಕೂಲಕ್ಕೆ ಅಂದರೆ ತಮ್ಮ ಪಾರ್ಟಿಯಲ್ಲಿ ಕೆಲಸವಿಲ್ಲದೆ ಇರತಕ್ಕ ಎಕ್ಸ್ ಪಾಲಿಟೀಷಿಯನ್ನಿಗೋ, ರಿಟೈರ್ಡ್ ಪಾಲಿಟೀಷಿಯನ್ನಿಗೋ ಅಥವಾ ಚುನಾವಣೆಯಲ್ಲಿ ಸೋತು ಹೋಗಿರತಕ್ಕ ಕಾಂಗ್ರೆಸ್ ಸದಸ್ಯನಿಗೋ ಒಂದು ಸ್ಥಾನ ಕಲ್ಪಿಸುವುದಕ್ಕಾಗಿ ಮಾಡಿರತಕ್ಕ ತಂತ್ರ ಇದು...........

(ಶ್ರೀ ಎಂ. ನಾಗಪ್ಪ)

ಸರ್ಕಾರದವರು ತಮ್ಮ ಮನಸ್ಸಿಗೆ ಬಂದವನನ್ನು ಮಾಡಬಹುದು ಎಂದಮೇಲೆ ಪ್ರಜಾಪ್ರಭುತ್ವದಲ್ಲಿ ತಮಗೆ ಎಷ್ಟು ನಂಬಿಕೆ ಇದೆ ಎಂಬುದನ್ನು ತಾವೇ ನೋಡಿಕೊಳ್ಳಬಹುದು. ಈ ಕಾಯಿದೆ ಮೂಲಕ ಡಬ್ಬಲ್ ಟ್ಯಾಕ್ಸೇಷನ್ ಹಾಕುತ್ತಾ ಇದ್ದೀರಿ ಎಂದು, ಭಾವಿಸುತ್ತೇನೆ. ಡೆವಲಪ್‌ಮೆಂಟ್ ಬೋರ್ಡಿನವರು ತೆಗೆದುಕೊಳ್ಳುವುದು ಮಾತ್ರವಲ್ಲದೆ, ಆಯಾಯಾ ಮುನಿಸಿಪಲ್ ಏರಿಯಾ, ಟೌನ್ ಏರಿಯಾ ಅಥವಾ ಪಂಚಾಯ್ತಿ ಏರಿಯಾದೊಳಗೆ ಯಾವ ಯಾವ ಪ್ರದೇಶಗಳು ಒಳಪಡುತ್ತವೆಯೋ ಅವಕ್ಕೆ ಮುನಿಸಿಪಲ್ ಆಕ್ಟ್ ಪ್ರಕಾರ ಬೆಟರ್‌ಮೆಂಟ್ ಟ್ಯಾಕ್ಸ್ ಹಾಕಲಿಕ್ಕೆ ಆಯಾಯಾ ಸಂಸ್ಥೆಗಳಿಗೆ ಅವಕಾಶವಿದೆ; ಈ ರೀತಿ ಎರಡು ಟ್ಯಾಕ್ಸ್ ವಸೂಲು ಮಾಡುವುದಕ್ಕೆ ಅವಕಾಶವಿದೆಯೆ ? ಇದನ್ನು ಸೂಕ್ತವಾಗಿ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

3-00 P.M.

ಎರಡನೆಯದಾಗಿ ಯಾವ ಮನೆಯನ್ನು ಬೇಕಾದರೂ ಪ್ಲಾನ್ ಪ್ರಕಾರ ಕಟ್ಟದಿದ್ದರೆ ಕೆಡವಿಸಬಹುದು ಮತ್ತು ತಾವೇ ಸ್ವಂತ ಕೆಡವಿಸಿ ಹಣ ವಸೂಲು ಮಾಡಬಹುದು ಇಂತಹ ಅಧಿಕಾರವನ್ನು ಸೆಕ್ಷನ್ 32 ಮತ್ತು 33ರಲ್ಲಿ ಬೋರ್ಡಿಗೆ ಕೊಟ್ಟಿದ್ದೀರಿ. ಅಧಿಕಾರಿಗಳು ತಪ್ಪು ಮಾಡಿದರೆ, ಕಮಿಟಿಯವರು ತಪ್ಪು ಮಾಡಿದರೆ ಅದಕ್ಕೆ ಏನಾದರೂ ಅಪೀಲ್ ಪ್ರಾವಿಜನ್ ಇದೆಯೇ ಎಂದರೆ ಇಲ್ಲ. ಮುನಿಸಿಪಾಲಿಟಿಯಲ್ಲಿ ಕಮಿಷನರ್ ಆಗಲಿ ಪ್ರೆಸಿಡೆಂಟ್ ಆಗಲಿ ಯಾವುದಾದರೂ ಆರ್ಡರ್ ಮಾಡಿದರೆ ಅದರ ಮೇಲೆ ಸ್ಟೇ ಆರ್ಡರ್ ತಂದು ಕೆಲಸ ನಿಂತದ್ದು ಇದೆ. ಆದರೆ ಈ ಬೋರ್ಡಿನಲ್ಲಿ ಯಾವುದು ಬೇಕಾದರೂ ಮಾಡಬಹುದು, ಅದಕ್ಕೆ ಅಪೀಲು ಸಹಿತ ಇಲ್ಲ, ರಿವಿಜನ್ ಇಲ್ಲ ಎಂದ ಮೇಲೆ ಇದರ ಅರ್ಥವೇನು ? ತಾವು ವ್ಯವಸ್ಥಿತವಾಗಿ ಕಾನ್‌ಸ್ಟಿಟ್ಯೂಟ್ ಮಾಡಿದ ಬೋರ್ಡಿಗೆ ಇಂತಹ ಒಂದು ಅಧಿಕಾರವನ್ನು ಕೊಡಲಿಕ್ಕೆ ಸಿದ್ಧವಾಗಿದ್ದಾಗ ಅಂತಹ ಅಪೀಲ್ ಪ್ರೊವಿಷನ್ ಒಂದನ್ನು ಏಕೆ ಇಡಲಿಲ್ಲ ? ಮನೆಗಳನ್ನು ಕೆಡವತಕ್ಕ ಪರಿಸ್ಥಿತಿಯಲ್ಲಿ ಅಥವಾ ತಾವೇ ಕೆಡವಿಸಿ ಹಣ ವಸೂಲು ಮಾಡತಕ್ಕ ಪರಿಸ್ಥಿತಿಯಲ್ಲಿ ಸಾಧಾರಣವಾದ ಒಂದು ಅಪೀಲಿಗೆ ಅವಕಾಶವನ್ನು ಕಲ್ಪಿಸುವುದು ವ್ಯವಸ್ಥಿತವಾಗುತ್ತಾ ಇತ್ತು. ಇದನ್ನು ಸರಿಪಡಿಸಬೇಕೆಂದು ಹೇಳುತ್ತೇನೆ.

ಕ್ಲಾಸ್ 20 (2)ರಲ್ಲಿ ಈ ರೀತಿ ಇದೆ :—

> " 20(2) : " Such betterment tax shall be an amount equal to one-third of the amount by which the market value of property on the completion of the execution of the Development Scheme or Improvement Scheme estimaited as if the property were clear of building exceeds, the market value of the property prior to such execution, estimated in like manner.

ಇದರಲ್ಲಿ ಗ್ರ್ಯಾಮ್ಯಾಟಿಕಲ್ ತಪ್ಪು ಇದೆಯೋ ಏನೋ ಗೊತ್ತಿಲ್ಲ, ಇದನ್ನು ಡ್ರಾಫ್ಟ್ ಮಾಡಿರುವುದು ಸರಿಯಾಗಿಲ್ಲವೇ ಇರಬಹುದು ಇದನ್ನು ಲೀಗಲ್ ಡಿಪಾರ್ಟ್‌ಮೆಂಟಿನವರು ಅಥವಾ ಸರ್ಕಾರದವರು ಸರಿಯಾಗಿ ಅರ್ಥ ಮಾಡಬಹುದು. ಅದರ ಅರ್ಥ ಏನು ಎಂಬುದನ್ನು ದಯವಿಟ್ಟು ತಿಳಿಸಬೇಕು.

ಇದರಲ್ಲಿ ಎಕ್ಸೆಸೀವ್ ಡೆಲಿಗೇಷನ್ ಆಫ್ ಪವರ್ಸ್ ಇದೆ. ನಾವು ಈಗಾಗಲೇ ಕೆಲವು ಕಡೆ ನೋಡಿದ್ದೇವೆ ಮತ್ತು ಅನುಭವಿಸಿದ್ದೇವೆ, ಇದರಿಂದ ಏನು ಅನಾಹುತವಾಗುತ್ತದೆ ಎಂಬುದು ಎಲ್ಲರಿಗೂ ಗೊತ್ತಿದೆ. ಕ್ಲಾಸ್ 3—

> "3(4): The Government may at any time, after consultation with the Board and the local authority or local authorities concerned by notification, include in the urban area specified under sub-section (3) any additional area and the area so included shall form part of the local area for which the Board is established."

ಇಂತಹ ಒಂದು ಅಧಿಕಾರವನ್ನು ಸರ್ಕಾರದ ಮೇಲೆ ಬಿಟ್ಟರೆ ರಾಜಕೀಯವಾಗಿ ಮತ್ತು ಬೇರೆ ದೃಷ್ಟಿಯಿಂದ ಸಹಿತ ತಮಗೆ ಬೇಕಾದಂತಹ ಕೆಲವು ಪಟ್ಟಣಗಳ ವಿಷಯಕ್ಕೆ ಮಾತ್ರ ಗಮನ ಕೊಟ್ಟು

ಉಳಿದ ಪಟ್ಟಣಗಳ ಕಡೆಗೆ ಗಮನ ಕೊಡದೇ ಹೋಗುವಂತಹ ಒಂದು ಪ್ರವೃತ್ತಿ ಸರ್ಕಾರಕ್ಕೆ ಬರುತ್ತದೆ. ಈ ಆಕ್ಟ್‌ನಲ್ಲಿ ಇಂತಹ ಬಹಳಷ್ಟು ಪ್ರೊವಿಜನ್‌ಗಳು ಇವೆ. ಇದನ್ನು ದಯವಿಟ್ಟು ಸರಿಯಾದ ರೀತಿಯಲ್ಲಿ ಪರಿಶೀಲನೆ ಮಾಡಿ ನೋಡಬೇಕು. ಎಕ್ಸೆಸೀವ್ ಡೆಲಿಗೇಷನ್ ಆಫ್ ಪವರ್ಸ್ ಕೊಡಕೂಡದು, ಎಲ್ಲಿ ಈ ಸಭೆಯಲ್ಲಿ ಮಾಡಲಿಕ್ಕೆ ಸಾಧ್ಯವಿಲ್ಲವೋ ಮತ್ತು ಸರಳ ರೀತಿಯಲ್ಲಿ ಸರ್ಕಾರದವರೇ ಮಾಡಲಿಕ್ಕೆ ಸಾಧ್ಯವಿದೆ ಅಂತಹ ಪರಿಸ್ಥಿತಿಯಲ್ಲಿ ಮಾತ್ರ ಕೆಲವು ಅಧಿಕಾರಗಳನ್ನು ಕೊಡುವುದು ಒಳ್ಳೆಯದು ಎಂದು ಹೇಳುತ್ತೇನೆ. ಈ ಸಭೆಗೆ ಇರತಕ್ಕ ಸಾಕಾದಷ್ಟು ಅಧಿಕಾರಗಳನ್ನು ಸರ್ಕಾರ ತಾನೆ ಇಟ್ಟುಕೊಂಡಿದೆ. ಇದನ್ನು ದಯವಿಟ್ಟು ತಿದ್ದುಪಡಿ ಮಾಡಬೇಕು.

ಇದರಲ್ಲಿ ಡಿಸ್ಕ್ರಿಮಿನೇಟರಿ ಪ್ರೊವಿಜನ್ಸ್ ಬಹಳ ಇವೆ. ಜಮೀನು ತೆಗೆದುಕೊಳ್ಳಬೇಕಾದರೆ ಕಾಂಪೆನ್‌ಸೇಷನ್ ಕೊಡುತ್ತಾ ಇದ್ದೀರಿ. ಒಂದುವೇಳೆ ಆ ಜಮೀನು ಉಪಯೋಗವಿಲ್ಲ ಎಂದು ತಿಳಿದು ಬಂದರೆ ಅದನ್ನು ವಾಪಸು ಕೊಡಬಹುದು. ಕೊಡುವ ಕಾಲಕ್ಕೆ ಮಾರ್ಕೆಟ್ ರೇಟ್‌ನಂತೆ ಕೊಡುತ್ತೇವೆ ಎಂದು ಅನ್ನುತ್ತೀರಿ. ಭೂಮಿಯನ್ನು ಯಾವ ತರಹದಲ್ಲೂ ಡೆವಲಪ್ ಮಾಡದೇ ಅವೇ ಓನರಿಗೆ ವಾಪಸು ಕೊಡಬೇಕಾದರೆ ಇವತ್ತಿನ ಮಾರ್ಕೆಟ್ ರೇಟ್‌ನಂತೆ ಕೊಡಬೇಕು ಎಂದು ಹೇಳುವುದು ಸರಿಯಲ್ಲ, ಮೊದಲು ಭೂಮಿಯನ್ನು ಯಾವ ರೇಟಿಗೆ ಕೊಂಡುಕೊಂಡಿದ್ದಿರೋ ಯಾವ ಕಾಂಪೆನ್‌ಸೇಷನ್ ಕೊಟ್ಟಿದ್ದಿರೋ ಅದನ್ನು ತೆಗದುಕೊಂಡು ವಾಪಸು ಕೊಡಬೇಕು. ಈ ರೀತಿ ಸೂಕ್ತವಾದ ತಿದ್ದುಪಡಿಯನ್ನು ಇದರಲ್ಲಿ ಮಾಡತಕ್ಕದ್ದು. ಕೊನೆಯಲ್ಲಿ ನಾನು ಹೇಳುವುದಿಷ್ಟೇ: ಈ ಕಾಯಿದೆಯಿಂದ ಡೆವಲಪ್‌ಮೆಂಟ್ ಆಗುವುದಿಲ್ಲ. ವಾಸ್ತವಿಕವಾಗಿ ಪ್ರಜಾತಂತ್ರದಲ್ಲಿರುವ ಮುನಿಸಿಪಾಲಿಟಿಗಳಿಗೆ ಇದು ಯಮಧರ್ಮರಾಯನ ರೂಪದಲ್ಲಿದೆ ಎಂದು ಹೇಳಿದರೆ ತಪ್ಪಾಗಲಾರದು. ಇದರಲ್ಲಿರುವ ಪ್ರಾವಿಷನ್ನುಗಳನ್ನು ಮುನಿಸಿಪಲ್ ಆಕ್ಟಿನಲ್ಲಿ ಅಳಪಡಿಸಿ ಮುನಿಸಿಪಾಲಿಟಿಗೆ ಅಥವಾ ಕಾರ್ಪೊರೇಷನ್ನಿಗೆ ಬಲ ಬರುವ ರೀತಿಯಲ್ಲಿ ಆಕ್ಟ್ ತಿದ್ದುಪಡಿಮಾಡಿ ಆ ಸಂಸ್ಥೆಗಳಿಗೆ (ಬಾಡಿಗಳಿಗೆ) ಡೆವಲಪ್ ಮಾಡುವ ಶಕ್ತಿ ಕೊಡಬೇಕು ಎಂದು ಹೇಳಿ, ಈ ಮಸೂದೆಯನ್ನು ನಾನು ಹೇಳಿದ ವಿಷಯಗಳ ಆಧಾರದ ಮೇಲೆ ವಿರೋಧಿಸುತ್ತೇನೆ.

MR. SPEAKER.—Mr. Jalisatgi will begin his speech after the Recess.

The House will rise and meet again at 3-40 P.M.

The House rose at Ten Minutes past Three of the Clock and re-assembled at Fifty Minutes past Three of the Clock.

[Mr. SPEAKER in the Chair]

†ಶ್ರೀ ಎಂ. ಎಂ. ಜಾಲಿಸತ್ಗಿ (ಭಟ್ಕಳ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದೆ ಇದ್ದ ಮಸೂದೆಯನ್ನು ವಿರೋಧಿಸುತ್ತ ನಾಲ್ಕು ಮಾತನ್ನು ಆಡಲು ಬಯಸುತ್ತೇನೆ.

ಈ ಮಸೂದೆ ಬಹಳ ಪ್ರತಿಗಾಮಿ ಸ್ವರೂಪದ್ದಿರುತ್ತದೆ. ಓಬೀರಾಯನ ಕಾಲದ ಒಂದು ಕಾಯಿದೆಯನ್ನು ಇಡೀ ವಿಶಾಲ ಕರ್ಣಾಟಕಕ್ಕೆ ಅನ್ವಯಿಸಬೇಕು ಎಂಬ ಧೋರಣೆ ಸರ್ಕಾರದ್ದಿದೆ ಎಂದು ಕಾಣುತ್ತದೆ. ನಾನು ಮುಂಬೈ ಕರ್ಣಾಟಕದಿಂದ ಬಂದವನು. ಮುಂಬೈ ಕರ್ಣಾಟಕ ಪ್ರದೇಶದಲ್ಲಿ ಬ್ರಿಟಿಷರ ಕಾಲದಲ್ಲಿ ಒಂದು ಸ್ಥಾನಿಕ ಸಂಸ್ಥೆಗೆ ಏನು ಅಧಿಕಾರವಿತ್ತೋ ಆ ಅಧಿಕಾರವನ್ನು ಕಿತ್ತೊಗೆಯಲಿಕ್ಕೆ, ಮೊಟಕು ಮಾಡಲಿಕ್ಕೆ ಪ್ರಯತ್ನ ಈಗ ಈ ಮಸೂದೆಯಿಂದ ನಡೆಯುತ್ತಿದೆ ಎಂದು ಕಾಣುತ್ತದೆ. ಆರಿಸಿದ ಪ್ರತಿನಿಧಿಗಳು ತಮ್ಮ ತಮ್ಮ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಮಾಡಲಿಕ್ಕೆ, ಮುನಿಸಿಪಾಲಿಟಿಯ ಕಾಯಿದೆಯಲ್ಲಿ ಅನುವಿತ್ತು. ಅದನ್ನು ಮೊಟಕುಗೊಳಿಸುವುದಕ್ಕೆ ಮತ್ತು ಈ ಕಾಯಿದೆಯನ್ನು ಅವರ ಮೇಲೆ ಹೇರಲಿಕ್ಕೆ ಪ್ರಯತ್ನವಾಗುತ್ತದೆ ಎಂದು ಇದರಿಂದ ಕಂಡುಬರುತ್ತದೆ. ಈ ಮಸೂದೆಯ 28ನೇ ಕಲಮಿನ ಪ್ರಕಾರ ಚುನಾಯಿತ ಪ್ರತಿನಿಧಿಗಳ ಆಳಿಕೆಯನ್ನು ಮೊಟಕುಗೊಳಿಸಲಿಕ್ಕೆ ಈ ಸರ್ಕಾರಕ್ಕೆ ಅಧಿಕಾರ ಬರುತ್ತದೆ ಇದರಿಂದ ಸ್ಥಾನಿಕ ಸಂಸ್ಥೆಗಳಿಗೆ ಇರುವ ಅಧಿಕಾರಗಳನ್ನು ಕಿತ್ತೊಗೆದು, ಆ ಅಧಿಕಾರವನ್ನು ಒಂದು ಬೋರ್ಡಿಗೆ ಕೊಡಲಿಕ್ಕೆ ಅವಕಾಶವಾಗುವುದೆಂದು 28ನೇ ಕಲಮಿನ ಪ್ರಕಾರ ಸ್ಪಷ್ಟವಾಗುತ್ತದೆ.

(ಶ್ರೀ ಎಂ. ಎಂ. ಜಾಲಿಸತ್ತಿ)

ನಮ್ಮಲ್ಲಿ ಬಾಂಬೆ ಡಿಸ್ಟ್ರಿಕ್ಟ್ ಮುನಿಸಿಪಲ್ ಆಕ್ಟ್ 1901 ಪ್ರಕಾರ ಏನು ಕಾಯಿದೆ ಇದೆಯೋ ಅದನ್ನು ಇಡೀ ವಿಶಾಲ ಮೈಸೂರು ರಾಜ್ಯಕ್ಕೆ ಅನ್ವಯವಾಗುವಂಥ ಒಂದು ಮುನಿಸಿಪಲ್ ಕಾನೂನು ಮಾಡುವಾಗ ಹಿಂದೆ ಎಷ್ಟು ಅಧಿಕಾರವಿತ್ತು ಅದನ್ನು ಮೊಟಕು ಮಾಡಿದ್ದಾರೆ. ಇಷ್ಟೇ ಅಲ್ಲ, ಈಗ ಈ ಕಾಯಿದೆ ಪ್ರಕಾರ ಅವರಿಗೆ ಏನು ಅಧಿಕಾರ ಇದೆಯೋ ಅದನ್ನೂ ಕಿತ್ತುಗೆಯಲಿಕ್ಕೆ ಈ ಮಸೂದೆಯ 28ನೇ ಕಲಮಿನಲ್ಲಿ ಅಧಿಕಾರವನ್ನು ಪಡೆಯುತ್ತಾರೆ. ಆದುದರಿಂದ ಮರ್ಯಾದಸ್ಥರಾದವರು, ಪ್ರಾಮಾಣಿಕವಾಗಿ ಕೆಲಸ ಮಾಡುವವರು ಯಾರು ಮುನಿಸಿಪಾಲಿಟಿಗೆ ಬರುತ್ತಿದ್ದರು ಅವರು ಇನ್ನು ಮುಂದೆ ಬರಲಿಕ್ಕಿಲ್ಲ, ಅವರು ಬರಲು ಸಂಶಯಪಟ್ಟಾರು, ಹಿಂದೆ ಸರಿದಾರು ಎಂದು ಅನ್ನಿಸುತ್ತದೆ. ಆದುದರಿಂದ ಇಂಥ ಪ್ರತಿಗಾಮಿ ಸ್ವರೂಪದ ಕಾಯಿದೆಯನ್ನು ತರಬಾರದು ಅಥವಾ ಇದರಲ್ಲಿರುವ 28ನೇ ಕಲಮನ್ನು ತೆಗೆದುಹಾಕಬೇಕು.

ನಗರಾಭಿವೃದ್ಧಿ ಆಗಬಾರದು ಎಂದು ನಾನು ಹೇಳುತ್ತಿಲ್ಲ. ನಗರಾಭಿವೃದ್ಧಿಯಾಗಬೇಕು. ಆದರೆ ಮುನಿಸಿಪಾಲಿಟಿ ಕಾಯಿದೆ, ಕಾರ್ಪೊರೇಷನ್ ಕಾಯಿದೆ ಏನಿದೆ ಅವುಗಳ ಪ್ರಕಾರವೇ ನಗರಾಭಿವೃದ್ಧಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಮಾನ್ಯ ಮಂತ್ರಿಗಳು ಮಾತನಾಡುತ್ತ, ಮುನಿಸಿಪಾಲಿಟಿಗಳಲ್ಲಿ ನಗರಾಭಿವೃದ್ಧಿ ಕೆಲಸಗಳನ್ನು ಮಾಡಲು ಸಾಕಷ್ಟು ದುಡ್ಡಿಲ್ಲ, ಏನು ಕಾರ್ಯಕ್ರಮ ಮಾಡಬೇಕೋ ಅದನ್ನು ಮಾಡಲಿಕ್ಕೆ ಅನುಕೂಲವಿಲ್ಲ ಎಂದು ಹೇಳಿದರು. ಬೋರ್ಡಿನ ಮುಖಾಂತರ ಕೆಲಸ ಮಾಡಬೇಕಾದರೆ ಸರ್ಕಾರ ಯಾವ ಅನುಕೂಲತೆಯನ್ನು ಕಲ್ಪಿಸಿಕೊಡುತ್ತದೆಯೋ ಅದೇ ಅನುಕೂಲತೆಗಳನ್ನು ಪೌರಸಭೆಗೆ ಅಥವಾ ಕಾರ್ಪೊರೇಷನ್ನಿಗೆ ಕೊಟ್ಟರೆ ಚುನಾಯಿತ ಸದಸ್ಯರು ಆ ಕೆಲಸವನ್ನು ಮಾಡುತ್ತಾರೆ. ತಜ್ಞರ ಸಲಹೆ ಬೇಕು ಎಂದರೆ ಅದನ್ನು ಕೊಡಿರಿ, ಅವರು ಪ್ಲಾನ್, ಎಸ್ಟಿಮೇಟ್ ಮಾಡಿ ಕೊಡಲಿ. ಇಂಥ ಅನುಕೂಲತೆಗಳನ್ನೆಲ್ಲ ಮಾಡಿ ಕೊಟ್ಟರೆ ಚುನಾಯಿತ ಸದಸ್ಯರೂ ಆ ಕೆಲಸಗಳನ್ನು ಮಾಡುತ್ತಾರೆ. ಅದಿಲ್ಲದೆ ಇಂಥ ಮಸೂದೆಯನ್ನು ತಂದು, ಪ್ರತ್ಯೇಕ ಬೋರ್ಡನ್ನು ನೇಮಕ ಮಾಡುವುದರಿಂದ ಚುನಾಯಿತ ಸದಸ್ಯರಲ್ಲಿ ಸರ್ಕಾರಕ್ಕೆ ವಿಶ್ವಾಸ ಇಲ್ಲ ಎಂದು ಅರ್ಥವಾಗುತ್ತದೆ. ಆ ರೀತಿ ಮಾಡಬಾರದು.

ಅಧಿಕಾರ ವಿಕೇಂದ್ರೀಕರಣವಾಗಬೇಕೆಂದು ಸರ್ಕಾರದವರು ಹೇಳುತ್ತಾರೆ ಮತ್ತು ಅದೇ ಇನ್ನೊಂದು ಕಡೆ ಅಧಿಕಾರವನ್ನು ಕೇಂದ್ರೀಕರಣ ಮಾಡುತ್ತಾರೆ. ಆರಿಸಿಬಂದಂಥ ಸದಸ್ಯರ ಎಲ್ಲ ಅಧಿಕಾರವನ್ನೂ ಮೊಟಕು ಮಾಡಿ ಸರ್ಕಾರ ನಾಮಕರಣ ಮಾಡಿದಂಥ ಜನರ ಕೈಯಲ್ಲಿ ಅಧಿಕಾರವನ್ನು ಕೊಡುವ ಪ್ರಯತ್ನ ನಡೆಯುತ್ತಿದೆ. ಚುನಾಯಿತ ಪ್ರತಿನಿಧಿಗಳಿರುವ ಸಂಸ್ಥೆಯ ಮೇಲೆ ಒಂದು ಹ್ಯಾಂಗಿಂಗ್ ಸ್ವೋರ್ಡ್ ಎನ್ನುವ ರೀತಿಯಲ್ಲಿ ಇದನ್ನು ಇಡಬೇಕು. ಎಂದು ಸರ್ಕಾರದ ಇಚ್ಛೆಯಾಗಿದೆ ಎನ್ನುವ ಅನುಮಾನಕ್ಕೆ ಅವಕಾಶ ಉಂಟು. ಅಂತಹದ್ದಿಲ್ಲದೆ ಪ್ರತಿಯೊಂದು ನಗರವನ್ನೂ ಸರಿಯಾಗಿ ಅಭಿವೃದ್ಧಿ ಮಾಡಬೇಕು ಎಂದು ಇದ್ದರೆ, ಈಗ ಇದ್ದ ಕಾಯಿದೆಯಲ್ಲಿಯೇ ಸ್ವಲ್ಪ ಬದಲಾವಣೆ ಮಾಡಿ, ಸ್ಥಳೀಯ ಸಂಸ್ಥೆಗಳಿಗೇ ಆದಷ್ಟು ಅಧಿಕಾರವನ್ನು ಕೊಡಬೇಕು. ಹಣದ ಅನುಕೂಲತೆಯನ್ನೂ ಮಾಡಿಕೊಡಬೇಕು. ಇಲ್ಲದೆ ಹೋದರೆ ಸ್ಥಾನಿಕ ಸಂಸ್ಥೆಗಳು ಇರುವುದಾದರೂ ಏಕೆ? ಅವು ರಿಡಂಡೆಂಟ್ ಆಗಬಹುದು. ಈ ಮೂಲಭೂತ ತತ್ವಕ್ಕೆ ಕೊಡಲಿ ಪೆಟ್ಟು ಕೊಡುವಂಥ ಮಸೂದೆ ಮಾಡಬಾರದು ಎಂದು ನನ್ನ ಸ್ಪಷ್ಟ ಅಭಿಪ್ರಾಯವಿದೆ.

ಎರಡನೆಯದಾಗಿ ಲೆವಿ ಆಫ್ ಬೆಟರ್‌ಮೆಂಟ್ ಟ್ಯಾಕ್ಸ್ ಎಂದು ಇದೆ. ಒಂದು ಕಡೆಗೆ ಬಿಲ್ಡಿಂಗ್ ಆದರೆ ಅದು ಪೂರ್ತಿಯಾದ ಕೂಡಲೇ ಸ್ಥಾನಿಕ ಸಂಸ್ಥೆಯವರು ಅದಕ್ಕೆ ಟ್ಯಾಕ್ಸ್ ಜಾಸ್ತಿ ಮಾಡುತ್ತಾರೆ. ಅದರ ಮೇಲೆ ಬೆಟರ್‌ಮೆಂಟ್ ಟ್ಯಾಕ್ಸ್ ಏನಾದರೂ ಹಾಕಿದರೆ ಡಬಲ್ ಟ್ಯಾಕ್ಸೇಷನ್ ಆಗುತ್ತದೆ. ಈ ರೀತಿ ಎರಡೆರಡು ಟ್ಯಾಕ್ಸೇಷನ್ ಮಾಡುವುದು ಸರಿಯಲ್ಲ ಎಂದು ಕಾಣುತ್ತದೆ.

ಮೂರನೆಯದಾಗಿ ಕೆಲವು ಓವರ್‌ಲ್ಯಾಪಿಂಗ್ ಪ್ರಾವಿಷನ್ಸ್ ಇವೆ. ಮುನಿಸಿಪಾಲಿಟಿಯವರು ಮಾಡುವ ಕರ್ತವ್ಯದಲ್ಲಿ ಬೋರ್ಡಿನವರು ಮಾಡುವುದೂ ಇದೆ. ಮಾನ್ಯ ಕೃಷ್ಣನ್ ಅವರು ಹೇಳಿದಂತೆ ಡ್ಯೂಯಲ್ ಕಂಟ್ರೋಲ್ ಆಗುತ್ತದೆ. ಆ ರೀತಿ ಡ್ಯೂಯಲ್ ಕಂಟ್ರೋಲ್ ಇರುವುದಕ್ಕೆ ಅವಕಾಶ ಮಾಡಿರುವುದು ಸರಿಯಲ್ಲ. ಈಗಿರುವ ಮುನಿಸಿಪಾಲಿಟಿ ಆಕ್ಟಿನಲ್ಲಾಗಲೀ, ಕಾರ್ಪೊರೇಷನ್ ಆಕ್ಟಿನಲ್ಲಾಗಲೀ ಸೂಕ್ತ ಬದಲಾವಣೆ ಮಾಡಿ ಅವರಿಗೇ ಕೊಡಬೇಕು, ಧನ ಸಹಾಯ ಮಾಡಬೇಕು ಇಂಥ ನಿಶ್ಚಿತ ಕ್ರಮವನ್ನು ತೆಗೆದುಕೊಳ್ಳಬೇಕು. ಸ್ಥಾನಿಕ ಸಂಸ್ಥೆಗಳವರು ಸರಿಯಾಗಿ ಮಾಡದೆ ಇದ್ದರೆ ಹೇಗೆ ಎಂದು ಕೆಲವರು ಕೇಳಬಹುದು. ಅವರು ಸರಿಯಾಗಿ ಮಾಡದೆ ಇದ್ದರೆ ಅಂಥ ಸಂಸ್ಥೆಗಳನ್ನು ಸೂಪರ್‌ಸೀಡ್ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರವಿದೆ. ಹಾಗಿದ್ದೂ ಮತ್ತೊಂದು ಕಾಯಿದೆಯನ್ನು ತರುವುದು ಅವಶ್ಯವಿಲ್ಲ ಎಂದು ನನ್ನ ಅಭಿಪ್ರಾಯವಿದೆ.

ಮಾನ್ಯ ನಾಗಪ್ಪನವರು ಮತ್ತೊಂದು ವಿಷಯವನ್ನು ಹೇಳಿದರು, ತಮಗೆ ಬೇಕಾಗಿದ್ದಂಥ ಜನರನ್ನು ತರುವುದಕ್ಕೆ ಅವಕಾಶ ಕಲ್ಪನೆ ಮಾಡಿದ್ದಾರೆ ಎಂದು. ಆ ರೀತಿ ಮಾಡಬಾರದು ಎಂದು ತಿಳಿಸಿ ಈ ಮಸೂದೆಯನ್ನು ನಾನು ವಿರೋಧ ಮಾಡುತ್ತೇನೆ.

4-00 P.M.

†ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಭಾಪತಿಗಳೇ, ಈಗ ಈ ಸಭೆಯ ಮುಂದೆ ನಗರಾಭಿವೃದ್ಧಿ ಆಡಳಿತ ಸಚಿವರು ಮಂಡಿಸಿರತಕ್ಕಂಥ ಅರ್ಬನ್ ಡೆವಲಪ್‌ಮೆಂಟ್ ಬೋರ್ಡ್‌ಗೆ ಸಂಬಂಧ ಪಟ್ಟಂಥ ಈ ಮಸೂದೆಯನ್ನು ಎರಡು ಕಾರಣಗಳಿಗಾಗಿ ವಿರೋಧಿಸಬೇಕಾಗಿದೆ.

ಮೊದಲನೆಯದಾಗಿ ಸರ್ಕಾರದವರು ತಮ್ಮ ಸರ್ವಾಧಿಕಾರ ಸಾರ್ವಭೌಮತ್ವವನ್ನು ಪ್ರತ್ಯಕ್ಷವಾಗಿ ಹೆಚ್ಚು ಮಾಡಿಕೊಳ್ಳುವ ಉದ್ದೇಶದಿಂದ ಈ ಮಸೂದೆಯನ್ನು ತಂದಿದ್ದಾರೆ. ಹೇಗೆಂದರೆ ಬೋರ್ಡ್‌ಗಳನ್ನು ನಿರ್ಮಾಣ ಮಾಡಿ ಅಧಿಕಾರವನ್ನು ವಿಕೇಂದ್ರೀಕರಣ ಮಾಡುತ್ತಾ ಇದ್ದಾರೆ. ಅದರಲ್ಲೂ ಬೆಂಗಳೂರು ನಾಗರೀಕರಿಗೆ ಬೋರ್ಡುಗಳಿಂದ ಆಗಿರತಕ್ಕಂಥ ಕಿರುಕುಳ ಅಷ್ಟಿಷ್ಟಲ್ಲ. ಬೆಂಗಳೂರು ಕಾರ್ಪೊರೇಷನ್ ಅಧಿಕಾರವನ್ನು ಮೊಟಕು ಮಾಡುವುದಕ್ಕೋಸ್ಕರ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್, ಹೌಸಿಂಗ್ ಬೋರ್ಡ್, ಎಂ.ಎಸ್.ಇ.ಬಿ. ಟೌನ್ ಪ್ಲಾನಿಂಗ್ ಅಥವಾ ಮೆಟ್ರೋಪಾಲಿಟನ್ ಬೋರ್ಡ್ ಮತ್ತು ವಾಟರ್ ಅಂಡ್ ಸೂಯರೇಜ್ ಬೋರ್ಡ್ ಈ ಬೋರ್ಡ್‌ಗಳನ್ನು ನಿರ್ಮಾಣ ಮಾಡಿದ್ದಾರೆ. ಕಾರ್ಪೊರೇಷನ್ನಿಗೆ ಇನ್ನು ಉಳಿದಿರುವಂಥಾದ್ದು ಬೀದಿ ಗುಡಿಸುವುದು ಮತ್ತು ಟ್ಯಾಕ್ಸ್ ವಸೂಲು ಮಾಡುವುದು. ಇವನ್ನು ಬಿಟ್ಟರೆ ಇನ್ನಾವುದೂ ಇಲ್ಲ. ರೋಡ್‌ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್‌ನವರು ಬೊಂಬಾಯಿಯಲ್ಲಿರುವಂತೆ ರೋಡ್ ಟ್ರಾನ್ಸ್‌ಪೋರ್ಟ್‌ನ ಕೆಲಸವನ್ನು ನೋಡಿಕೊಳ್ಳುತ್ತಾರೆ.

ಎರಡನೆಯದಾಗಿ ಈ ಬೋರ್ಡ್‌ಗಳು ಮಾಡಿರತಕ್ಕಂಥ ಹಾವಳಿ ಅಷ್ಟಿಷ್ಟಲ್ಲ. ಎಲೆಕ್ಟ್ರಿಸಿಟಿ ಬೋರ್ಡ್ ದೀಪ ಆರಿಸಿದ ದಿನವೇ ಇಲ್ಲ. ಬಿಲ್ ಕಳುಹಿಸುವುದರಲ್ಲಿ ಯಾವ ಒಂದು ಕ್ರಮವೂ ಇಲ್ಲ; ಒಂದು ನೀತಿಯೂ ಇಲ್ಲ. ಬಿಲ್ಲು ಬಂದ ಕೂಡಲೇ ಮರು ದಿವಸವೇ ಕಟ್ಟಬೇಕಾಗುತ್ತದೆ, ಇಲ್ಲದಿದ್ದರೆ ನಮ್ಮದು ತಪ್ಪಾಗುತ್ತದೆ. ಎಲೆಕ್ಟ್ರಿಸಿಟಿ ಬೋರ್ಡ್ ಬಂದ ಮೇಲೆ ಊಟ ಮಾಡುತ್ತಿರಲಿ, ಮದುವೆ ಆಗುತ್ತಿರಲಿ, ದೀಪ ಆರಿಹೋಗುತ್ತದೆ. ನಮ್ಮ ಮನೆಗೆ ಮೊದಲು $2\frac{1}{2}$ ರೂಪಾಯಿ ಬಿಲ್ಲು ಬರುತ್ತಿದ್ದುದು ಈಗ 10 ರೂಪಾಯಿ ಬರುತ್ತದೆ. ಅದಕ್ಕೆ ಒಂದು ಲೆಕ್ಕಾಚಾರ ಇಲ್ಲ. ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ನಿರ್ಮಾಣವಾಗಿ ಈಗಾಗಲೇ 23 ವರ್ಷವಾಯಿತು. ಇದರಿಂದ ಬೆಂಗಳೂರು ನಾಗರಿಕರಿಗೆ ಏನು ಒಂದು ಇಂಪ್ರೂವ್‌ಮೆಂಟ್ ಆಗಿಲ್ಲ. ನಗರದ ಸುತ್ತ ಮುತ್ತಲೂ ಸೊಳ್ಳೆಗಳ ಇಂಪ್ರೂವ್‌ಮೆಂಟ್ ಮಾತ್ರ ಆಗಿದೆ. ಇವರ ಮುಖ್ಯ ಕೆಲಸ ಏನೆಂದರೆ, ಸೈಟುಗಳನ್ನು ಮಾಡಿ ಯಾರಿಗೆ ಇನ್‌ಫ್ಲೂಯನ್ಸ್ ಇದೆ, ಯಾರು ಲಂಚ ಕೊಡುವುದಕ್ಕೆ ಶಕ್ಯರಾಗಿದ್ದಾರೋ ಅವರಿಗೆ ಕೊಡುವುದು.

ಶ್ರೀ ಕೆ. ಪುಟ್ಟಸ್ವಾಮಿ.—ಅಪ್ಲಿಕೇಷನ್ ಕೊಟ್ಟಿರುವವರಿಗೆ ಸೈಟು ಸಿಕ್ಕಿದೆ.

ಶ್ರೀ ಟಿ. ಆರ್. ಶಾಮಣ್ಣ. ಈಗ ಟ್ರಸ್ಟ್ ಬೋರ್ಡ್ ಪ್ರಾರಂಭವಾದ ಮೇಲೆ ಬೆಂಗಳೂರು ನಗರದಲ್ಲಿ 80 ಸಾವಿರ ಅನ್‌ಆಥರೈಸ್ಡ್ ಲೇಔಟ್ಸ್ ಇವೆ. ಸರ್ಕಾರದವರು ಈಗ ಬೆಂಗಳೂರು ನಗರದಲ್ಲಿ 8 ಸಬ್‌ರಿಜಿಸ್ಟ್ರಾರ್ ಆಫೀಸ್ ಮಾಡಿದ್ದಾರೆ. ಈ ಅನ್ ಆಥರೈಸ್ಡ್ ಲೇಔಟ್ಸನ್ನು ರಿಜಿಸ್ಟರ್ ಮಾಡುವುದಿಲ್ಲ. ಏಕೆ ಮಾಡಬಾರದಾಗಿತ್ತು ? ಬೆಂಗಳೂರು ನಗರದಲ್ಲಿ 43 ಲೇಔಟ್ಸ್‌ಗಳನ್ನು ರೆಗ್ಯುಲರೈಸ್ ಮಾಡಿದರು. ಟ್ರಸ್ಟ್ ಬೋರ್ಡ್‌ನವರು ತಮಗೆ ಬೇಕಾದವರಿಗೆ ರೆಕಮಂಡ್ ಮಾಡಿ ಈ ಲೇಔಟ್ಸನ್ನು ರೆಗ್ಯುಲರೈಸ್ ಮಾಡಿದರು. ಬೆಂಗಳೂರಿನಲ್ಲಿ ಸೈಟುಗಳು ನಿಜವಾಗಿ ಯಾರಿಗೆ ಬೇಕೋ ಅವರಿಗೆ ಸಿಕ್ಕಿದ್ದ ಪಕ್ಷದಲ್ಲಿ ಈ ಅನ್‌ಆಥರೈಸ್ಡ್ ಲೇಔಟ್ಸ್ ಬೆಳೆಯುವುದಕ್ಕೆ ಅವಕಾಶ ಇರಲಿಲ್ಲ. ತಮಗೆ ಸೈಟುಗಳು ಸಿಕ್ಕಲಿಲ್ಲ ಎಂದು ಈ ಅನ್ ಆಥರೈಸ್ಡ್ ಸೈಟುಗಳನ್ನು ಕೊಂಡುಕೊಳ್ಳಬೇಕಾಯಿತು. ಇದಕ್ಕೆ ಟ್ರಸ್ಟ್‌ಬೋರ್ಡ್ ಕಾರಣ ಎಂದು ಹೇಳಬಹುದು. ಬೆಂಗಳೂರು ಸುತ್ತ ಮುತ್ತ ಪ್ಲಾನ್ ತಯಾರ್ಮಾಡಿದ್ದಾರೆಯೇ? ಟ್ರಸ್ಟ್‌ಬೋರ್ಡ್ ಇಲ್ಲದೇ ಇರುವ ಕಡೆ ಖಾಸಗಿಯವರು ಸೈಟುಗಳನ್ನು ಮಾಡುವುದಕ್ಕೆ ಬಂದರೆ ಅವರಿಗೆ ಅವಕಾಶ ಮಾಡಿಕೊಡಬೇಕಾಗಿತ್ತು. ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್‌ನವರು ಏನೂ ಇಂಪ್ರೂವ್ ಮಾಡಿಲ್ಲ. ಆದುದರಿಂದ ಜನಗಳಿಗೆ ಇದರಲ್ಲಿ ಟ್ರಸ್ಟೇ ಇಲ್ಲದಂತಾಗಿದೆ. ಈಗ ಬೆಂಗಳೂರು ಮತ್ತು ಮೈಸೂರಿನಲ್ಲಿರತಕ್ಕಂಥ ಜಾಡ್ಯವನ್ನು ಎಲ್ಲಾ ಕಡೆಗೂ ಹರಡುತ್ತಿದ್ದಾರೆ. ಈ ಜಾಢ್ಯ ಪಟ್ಟಣಗಳಲ್ಲೇ ಏಕೆ ಇರಬೇಕು ಎಲ್ಲಾ ಕಡೆಗೂ ಹರಡಲಿ ಎಂದು ಮಾಡಿದ್ದಾರೆ.

(ಶ್ರೀ ಟಿ. ಆರ್. ಶಾಮಣ್ಣ)

ಇನ್ನು ವಾಟರ್‌ಸಪ್ಲೈ ಅಂಡ್ ಸೂಯರೇಜ್ ಬೋರ್ಡ್ ನಗರದ ನಾಗರಿಕರಿಗೆ ಕಾವೇರಿ ನೀರನ್ನು ಕೊಡುತ್ತೇವೆ ಎಂದು ಹೇಳಿ 5 ವರ್ಷವಾಯಿತು. ಮುಂದಿನ ವರ್ಷಕ್ಕೆ ಬರಬೇಕಾಗಿತ್ತು. ಅದು ಇನ್ನೂ ಇಂಪ್ಲಿಮೆಂಟ್ ಆಗಿಲ್ಲ. ಈ ಬೋರ್ಡ್ ಜನಗಳಿಗೆ ಕಿರುಕುಳ ಕೊಡುತ್ತಾ ಬಂದಿದೆಯೇ ಹೊರತು ಅನುಕೂಲ ಮಾಡಿ ಕೊಡುವುದಕ್ಕೆ ಬಂದಿಲ್ಲ. ಈ ರೀತಿ ಕಿರುಕುಳ ಕೊಡುವುದು ಬೇಡ. ಬೋರ್ಡುಗಳಿಂದ ನಾಗರೀಕರಿಗೆ ಇರತಕ್ಕಂಥ ಹಕ್ಕು ಬಾಧ್ಯತೆಗಳನ್ನು ಕಿತ್ತುಕೊಂಡಿದೆ. ಲೋಕಲ್ ಸೆಲ್ಫ್ ಗೌರ್ನಮೆಂಟ್ ಎಂದು ನೆಪ ಮಾಡಿ ಇದು ನಾಮಕಾವಾಸ್ತೆಯ ಒಂದು ಸಂಸ್ಥೆ ಆಗುವ ಹಾಗೆ ಮಾಡಿದ್ದಾರೆ. ಇದರಿಂದ ನಿಜವಾಗಿಯೂ ಜನಗಳಿಗೆ ಇದ್ದಂಥ ಡೆಮಾಕ್ರಸಿಯು ಇಲ್ಲದಂತಾಗಿದೆ. ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಮುಂಚಿತವಾಗಿ ಲೋಕಲ್ ಸೆಲ್ಫ್ ಗೌರ್ನಮೆಂಟ್ ಹುಟ್ಟಿದ್ದೇ ಹೊರತು, ಈಗ ಅದರ ಆಡಳಿತ ಮೊಟಕು ಮಾಡಿ ಜನಗಳಿಗೆ ಯಾವ ವಿಧವಾದಂಥ ಪ್ರಯೋಜನವೂ ಇದರಿಂದ ಆಗುತ್ತಾ ಇಲ್ಲ. ನಗರ ಬೆಳವಣಿಗೆ ಆಗಬೇಕು ಎನ್ನುವುದಕ್ಕೆ ನಿಗಾ ಕೊಡುವುದಿಲ್ಲ. ಬೋರ್ಡುಗಳು ಮಾಡುತ್ತಾ ಬಂದರೆ ಬೆಳವಣಿಗೆ ಆಗುತ್ತದೆಯೇ ಎನ್ನುವುದನ್ನು ಯೋಚನೆ ಮಾಡಿ. ಈಗ ಮಾನ್ಯ ಸಚಿವರು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿಕೊಡುತ್ತೇವೆ ಎಂದು ಒಪ್ಪಿದ್ದಾರೆ. ಸಂತೋಷ. ಆದರೆ ಹೊಸದಾಗಿ ಬೆಂಗಳೂರು ಡೆವಲಪ್ ಆಗುತ್ತಾ ಇರುವಾಗ, ಒಂದು ವರ್ಷದ ಕೆಳಗೆ ರಿಪೋರ್ಟನ್ನು ತಯಾರಿಸುವ ಬದಲಾಗಿ; ಸನ್ನಿವೇಶವನ್ನು ನೋಡಿಕೊಂಡು ಬದಲಾವಣೆ ಮಾಡುವುದಕ್ಕೆ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ, ಅದರಲ್ಲಿ ಜನಗಳ ಒಂದು ಮಿತಿ ನಿಗದಿ ಮಾಡಬೇಕೆಂದು ಒಂದು ಸಲಹೆ ಕೊಡುತ್ತೇನೆ. ಈ ಸಂದರ್ಭದಲ್ಲಿ ಬೋರ್ಡ್ ಕಾನ್‌ಸ್ಟಿಟ್ಯೂಷನ್ ಸುಧಾರಣೆ ಮಾಡುವಾಗ ಆ ಕ್ಷೇತ್ರದಲ್ಲಿರತಕ್ಕಂಥ ಒಬ್ಬ ಎಂ.ಎಲ್.ಎ. ಸೇರಿಸಬೇಕು. ಅವರು ಏನಾದರೂ ಸಲಹೆ ಕೊಡುವುದಕ್ಕೆ ಅವಕಾಶವಾಗುತ್ತದೆ ಮತ್ತು ಜನಗಳ ಪ್ರತಿನಿಧಿಗಳು ಜನರ ಕಷ್ಟ ಸುಖಗಳು ಏನು ಇವೆಯೋ ಅವನ್ನು ಹೇಳುವುದಕ್ಕೆ ಅನುಕೂಲವಾಗುತ್ತದೆ. ತಮಗೆ ಈ ಬೋರ್ಡುಗಳ ಆಡಳಿತ ಚೆನ್ನಾಗಿ ನಡೆಯಬೇಕೆಂಬ ತಮ್ಮ ಉದ್ದೇಶವಿದ್ದ ಪಕ್ಷದಲ್ಲಿ, ಮೆಂಬರುಗಳು ಅಕ್ರಮ ಅನ್ಯಾಯಗಳನ್ನು ಮಾಡಿದರೆ, ಅವನ್ನು ತಡೆಗಟ್ಟುವುದಕ್ಕೆ ಸ್ಟ್ರಿಂಜೆಂಟ್ ಮೆಜರ್ ಇರಬೇಕು. ಆದ್ದರಿಂದ ಅನ್ಯಾಯ ಅಕ್ರಮ, ಲಂಚಕೋರ ಮೆಂಬರುಗಳನ್ನು ತೆಗೆದು ಹಾಕುವುದಕ್ಕೆ ಇನ್ನೂ ಸ್ಟ್ರಿಂಜೆಂಟ್ ಕ್ಲಾಸ್ ಮಾಡುವುದು ಉತ್ತಮವೆಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಟ್ರಸ್ಟೀಸ್ ಎಂದಮೇಲೆ ಅವರು ಉತ್ತಮ ಧರ್ಮದರ್ಶಿಗಳಾಗಿರಬೇಕು. ಇನ್ನು ಔಟ್‌ಲೇ ಡೆವಲಪ್‌ಮೆಂಟ್ ಪ್ಲಾನ್. ಊರೆಲ್ಲಾ ನಿರ್ಮಾಣವಾದ ಮೇಲೆ ಇದನ್ನು ತೆಗೆದುಕೊಂಡು ಬರುತ್ತಾರೆ. ಮೊದಲೆ ತೆಗೆದುಕೊಂಡು ಬಂದಿದ್ದರೆ ಚೆನ್ನಾಗಿತ್ತು. ಮನೆ ಕಟ್ಟುವಾಗ 20 ರೂಪಾಯಿ ಪಿ.ಯು.ಸಿ. (prevention of unauthorised construction) ಅಧಿಕಾರಿಗಳಿಗೆ ಲಂಚ ಕೊಟ್ಟರೆ, ಒಂದೇ ಸಾರಿ ಆಕ್ಟ್ ಮೊಟಕಾಗಿ ಬಿಡುತ್ತದೆ. ಇದನ್ನು ತೆಗೆದುಕೊಳ್ಳಬೇಕಾದರೆ ಒಂದು ತೀವ್ರ ಕ್ರಮ ತೆಗೆದುಕೊಂಡು ಮಾಡಬೇಕಾಗುತ್ತದೆ. ತಾವು ಮಂತ್ರಿಗಳಾಗಿ ಇದ್ದೀರಿ, ತಾವು ಮಾಡಿಸಬಹುದು. ಇನ್ನು ಬೆಟರ್‌ಮೆಂಟ್ ಲೆವಿ ಬಗ್ಗೆ ಹೇಳಿದ್ದೀರಿ. ಇದನ್ನು ಸರಿಯಾದ ರೀತಿಯಲ್ಲಿ ವಸೂಲು ಮಾಡಿದ ಪಕ್ಷದಲ್ಲಿ ಬೆಂಗಳೂರು ನಗರದ ನೀರಿನ ವ್ಯವಸ್ಥೆಯನ್ನಾಗಲಿ, ಚರಂಡಿ ವ್ಯವಸ್ಥೆಯನ್ನಾಗಲೀ ಮಾಡುವುದಕ್ಕಾಗುತ್ತಿತ್ತು. ಎಲ್ಲಾ ಅನಾಚಾರಗಳು ಆದಮೇಲೆ ಆಕ್ಟ್ ಎನ್‌ಫೋರ್ಸು ಮಾಡುವುದು ಸರಿಯಲ್ಲ. ಬೆಂಗಳೂರು ನಗರದಲ್ಲಿ ಟ್ರಸ್ಟ್ ಬೋರ್ಡು ಮಾಡಿದರು. ಅನಧಿಕೃತವಾದ ಸೈಟುಗಳು ಉದ್ಭವವಾಯಿತು. ಸರಿಯಾದ ಕಾರ್ಯಕ್ರಮ ಹಾಕಿಕೊಂಡು ಅಭಿವೃದ್ಧಿ ಮಾಡಿದರೆ ಮಾತ್ರ ಬೋರ್ಡಿನಿಂದ ಪ್ರಯೋಜನವಾಗುತ್ತದೆ ಹೊರತು ಆಕ್ಟ್ ಇದ್ದರೂ ಆಗತಕ್ಕ ಅನಾಚಾರಗಳು ಆಗುತ್ತಾ ಇರುತ್ತವೆ. ಬೆಂಗಳೂರು ನಗರದ ತೊಂದರೆ ಏನೆಂದರೆ, ಟ್ರಸ್ಟ್ ಬೋರ್ಡಿನಿಂದ ಕಾರ್ಪೋರೇಷನಿನವರು ಅನೇಕ ಏರಿಯಾಸ್ ತೆಗೆದುಕೊಂಡಿದ್ದಾರೆ. ತೆಗೆದುಕೊಳ್ಳುವಾಗ 15 ಲಕ್ಷ ರೂಪಾಯಿಗೆ ಎಸ್ಟಿಮೇಟ್ ಆಗಿ ತೆಗೆದುಕೊಂಡಿದ್ದಾರೆ. ಈಗ ಅದಕ್ಕೆ ಕಾರ್ಪೋರೇಶನ್ನಿನವರು ಒಂದೂವರೆ ಕೋಟಿ ರೂಪಾಯಿ ಖರ್ಚು ಮಾಡಿದರೂ ಅದು ಸರಿಯಾಗುವುದಿಲ್ಲ. ಮೊದಲು 3-5 ರೂಪಾಯಿ ಫಿಕ್ಸ್ ಮಾಡಿದರು. ಆವಾಗಲೇ ನೀರಿನ ಸಮಸ್ಯೆ, ಅಂಡರ್‌ಗ್ರೌಂಡ್ ಸಮಸ್ಯೆ ಎಲ್ಲಾ ಲೆಕ್ಕ ಹಾಕಿ ಮಾಡುತ್ತಿದ್ದರೆ ಒಳ್ಳೆಯದಿತ್ತು. ಈಗ 14–15 ರೂಪಾಯಿ ಮಾಡುತ್ತಿದ್ದಾರೆ. ಅದಕ್ಕೋಸ್ಕರ ಡೆವಲಪ್ ಎಷ್ಟು ಬೇಕು ಅಷ್ಟು ಮಾಡಿ ಕಾರ್ಪೋರೇಶನಿಗೆ ಹ್ಯಾಂಡ್ ಓವರ್ ಮಾಡಬೇಕು. ಲೇ ಔಟ್ ಫಿಕ್ಸ್ ಮಾಡುವಾಗಲೂ ಡೆವಲಪ್‌ಮೆಂಟ್ ಏನು ಬೇಕು ಅದನ್ನು ಲೆಕ್ಕಕ್ಕೆ ತೆಗೆದುಕೊಂಡು ಮಾಡಬೇಕಾಗುತ್ತದೆ. ಮತ್ತು ಅನೇಕ ಪಬ್ಲಿಕ್ ಜಾಗಗಳನ್ನು ಟ್ರಸ್ಟ್ ಬೋರ್ಡಿನವರು ಸೈಟುಗಳನ್ನಾಗಿ ಮಾಡಿದ್ದಾರೆ. ಆರೀತಿ ಆಗದ ಹಾಗೆ ನೋಡಿಕೊಳ್ಳಬೇಕು.

ಯಾವುದೇ ಕಾರ್ಯಕ್ರಮ ಹಾಕಿಕೊಂಡರೂ ಅದು ಸರಿಯಾದ ರೀತಿಯಲ್ಲಿ ಆಗುವಂತೆ ನೋಡಿಕೊಳ್ಳಬೇಕು. ಈ ಒಂದು ಬಿಲ್ಲನ್ನು ತಂದು ಅದು ಸರಿಯಾಗಿ ಜಾರಿಗೊಳ್ಳದಿದ್ದಲ್ಲಿ, ಅದು ಸರಿಯಾಗಿ ಉಪಯೋಗವಾಗದಿದ್ದಲ್ಲಿ ಏನೂ ಪ್ರಯೋಜನವಿಲ್ಲ. ಹೌಸಿಂಗ್ ಬೋರ್ಡು ಇದೆ, ಎಲೆಕ್ಟ್ರಿಸಿಟಿ ಬೋರ್ಡು ಇದೆ, ಹೀಗೆ ಹಲವಾರು ಬೋರ್ಡುಗಳು ಇವೆ. ಹೌಸಿಂಗ್ ಬೋರ್ಡಿಗೆ ಮನೆ ಕಟ್ಟುವ ಅಧಿಕಾರ ಕೊಟ್ಟಿದ್ದಾರೆ. ಇವತ್ತು ಅನೇಕ ಇಲಾಖೆಗಳಲ್ಲಿ Co-ordination ಇಲ್ಲ. ಮುಂದೆ ಕೋ ಆರ್ಡಿನೇಶನ್ ಬರತಕ್ಕ ಒಂದು ಏಜೆನ್ಸಿ ಕ್ರಿಯೇಟ್ ಮಾಡಬೇಕು. ಇವತ್ತು ಒಂದು ಕಡೆ ಚರಂಡಿ ರಿಪೇರಿ ಮಾಡುತ್ತಾರೆ, ಇನ್ನೊಂದು ಕಡೆ ಕೇಬಲ್ಸ್ ಹಾಕುತ್ತಿದ್ದಾರೆ, ಇನ್ನೊಂದು ಕಡೆ ಪೈಪ್ಸ್ ಹಾಕುತ್ತಿದ್ದಾರೆ. ಒಬ್ಬರು ಮಾಡುತ್ತಿದ್ದದ್ದನ್ನು ಇನ್ನೊಬ್ಬರು ಕೆಡಿಸುತ್ತಿದ್ದಾರೆ. ಇದನ್ನು ಆ ರೀತಿ ಆಗದಂತೆ ನೋಡಿಕೊಳ್ಳಬೇಕು. ಅನೇಕ ಲೋಕಲ್ ಅಥಾರಿಟೀಸ್ ಬೋರ್ಡುಗಳಲ್ಲಿ ಕಾನ್‌ಫ್ಲಿಕ್ಟ್ ಬರುತ್ತದೆ. ಹಾಗೆ ಬಂದ ಪಕ್ಷದಲ್ಲಿ ಅದನ್ನು ಹೇಗೆ ಬಗೆಹರಿಸಬೇಕು ಎಂದು ಸಾಕಷ್ಟು ವಿವರಣೆಯನ್ನು ಕೊಟ್ಟರೆ ಒಳ್ಳೆಯದು.

ಕೊನೆಯದಾಗಿ, ಡಿಮಾಲಿಶನ್ ಆಫ್ ಹೌಸಸ್ ಅನ್ ಆಥರೈಸಡಲೀ ಕನ್‌ಸ್ಟ್ರಕ್ಟೆಡ್ (Demolition of Houses unauthorisedly constructed) ವಿಚಾರ. ಬೆಂಗಳೂರಿನಲ್ಲಿ ಈ ರೀತಿಯ ಕಟ್ಟಡ ಸುಮಾರು 5 ಸಾವಿರ ಇವೆ. ಇದರಲ್ಲಿ ಅನೇಕ ಬಡಬಗ್ಗರೂ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಪ್ರಕಾಶನಗರ ಮುಂತಾದ ಕಡೆಗಳಲ್ಲಿ ಇಡೀ ಊರಲ್ಲೇ ಕಟ್ಟಿಕೊಂಡಿದ್ದಾರೆ. ಮುಖ್ಯವಾಗಿ ಇವುಗಳಲ್ಲಿ ಪ್ಲಾನಿಗೆ ವಿರುದ್ಧವಾಗಿರತಕ್ಕ ಮನೆಗಳನ್ನು ಬಿಟ್ಟು ಉಳಿದವುಗಳನ್ನು ಉಳಿಸಬೇಕು. ಏಕೆಂದರೆ ಅನೇಕ ಬಡಬಗ್ಗರು ಆಸ್ತಿಪಾಸ್ತಿಗಳನ್ನು ಹಾಕಿಕೊಂಡು ಮನೆಗಳನ್ನು ಕಟ್ಟಿದ್ದಾರೆ. ಮುಖ್ಯವಾಗಿ ಎಷ್ಟು ಬೇಕು ಅಷ್ಟು ಮಾತ್ರ ತೆಗೆದು, ಮಿಕ್ಕಿದ್ದನ್ನೆಲ್ಲಾ ಹಾಗೆ ಬಿಡಬೇಕು. ಇಷ್ಟು ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಬಸವರಾಜು (ಕೃಷ್ಣರಾಜನಗರ).—ಸನ್ಮಾನ್ಯ ಸಭಾಪತಿಗಳೇ, ಈ ಮೈಸೂರು ಅರ್ಬನ್ ಡೆವಲಪ್‌ಮೆಂಟ್ ಬೋರ್ಡು ಬಿಲ್ 1967 ಬಗ್ಗೆ ನಮ್ಮ ಮಾನ್ಯ ಮಿತ್ರರು ಅನೇಕರು ಮಾತನಾಡಿದ್ದಾರೆ. ಕೆಲವು ಸಲಹೆಗಳು ಚೆನ್ನಾಗಿವೆ. ಆದರೆ ಒಂದು ಮಾತ್ರ ನಾನು ಒಪ್ಪಲು ಸಾಧ್ಯವಿಲ್ಲ. ಈ ಬೋರ್ಡು ಕಾನ್‌ಸ್ಟಿಟ್ಯೂಟ್ ಮಾಡುವುದು ಬೇಡ ಎಂದು ಹೇಳುವುದು. ಈಗ ಹಲವಾರು ಬೋರ್ಡುಗಳು ಇವೆ. ಇದರಲ್ಲಿ ಕರಪ್‌ಷನ್ ಜಾಸ್ತಿಯಾಗುತ್ತಿದೆ; ಮೂಲ ಉದ್ದೇಶ ಏನಿದೆ, ಅದು ಸರಿಯಿಲ್ಲ, ಪಾಸ್ ಮಾಡುವುದು ಬೇಡ ಎಂದು ಹೇಳುವಂತಹ ಸಲಹೆಗಳು ಸೂಕ್ತವಾದ ಸಲಹೆಗಳಲ್ಲವೆಂದು ನನ್ನ ಅಭಿಪ್ರಾಯ. ನಾನು ಕಳೆದ 8—10 ವರ್ಷಗಳಿಂದ ಗ್ರಾಮ ಪಂಚಾಯಿತಿ, ತಾಲ್ಲೂಕು ಬೋರ್ಡುಗಳ ಅನುಭವದಿಂದ ಹೇಳುವುದಾದರೆ, ಎಲ್ಲರೂ ಒಳ್ಳೆಯವರು, ಎಲ್ಲರೂ ಕೆಟ್ಟವರು ಎಂದು ಹೇಳುವುದಕ್ಕಾಗುವುದಿಲ್ಲ. ಪ್ರತಿಯೊಂದು ಸಂಸ್ಥೆಯಲ್ಲಿಯೂ ಸಹ ಬಡವರು ಇರುತ್ತಾರೆ. ಹಣ ಕೊಡದವರೂ ಇರುತ್ತಾರೆ. ಪ್ರತಿಯೊಂದು ವಿಷಯವೂ ನಮ್ಮ ಮನೋಧರ್ಮದ ಮೇಲೆ ಹೋಗುತ್ತದೆ. ಆದರೆ ಕಾನೂನಿನಿಂದಲೇ ಎಲ್ಲವನ್ನೂ ಮಿತಿಗೊಳಿಸುವುದಕ್ಕಾಗುವುದಿಲ್ಲ. ಕಾನೂನನ್ನು ಮಿತಿಗೊಳಿಸಿ ಪ್ರತಿಯೊಂದನ್ನೂ ಕಾನೂನು ಮೂಲಕ ಚಾಚೂ ತಪ್ಪದೆ ಮಾಡಬೇಕು ಅಂದರೆ ಕಾನೂನುಗಳಿಗೆ ಸೋತು ಮಾಡಬೇಕಾಗುತ್ತದೆ. ಸಾರ್ವತ್ರಿಕವಾಗಿರತಕ್ಕ ಕಾನೂನು ಅಮಲಿನಲ್ಲಿ ಬರುತ್ತದೆ. ಆದ್ದರಿಂದ ಸಾರ್ವತ್ರಿಕವಾಗಿ ಕಾನೂನು ಆಗುವವರೆಗೂ ಲಂಚಕೋರತನ, ಆಸ್ತಿಪಾಸ್ತಿ ಮಾಡುವುದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಈ ವಿಚಾರ ನಮ್ಮಲ್ಲಿ ಜಾರಿಯಲ್ಲಿ ಇಲ್ಲದೇ ಇರುವುದರಿಂದ ಒಂದು ಬೋರ್ಡ್ ಆಗುವುದು ಈಗ ಬೇಡವೆಂದು ಇನ್ನೊಂದು ಸಲಹೆ ಇದೆ. ಅದು ಅಷ್ಟು ಸಾಧುವಾದ ಸಲಹೆಯಲ್ಲವೆಂದು ನಾನು ಅಭಿಪ್ರಾಯಪಡುತ್ತೇನೆ.

ಇನ್ನೊಂದು ವಿಷಯ. ಈ ಬೋರ್ಡ್‌ಗಳನ್ನು ಮಾಡುವುದು ಒಳ್ಳೆಯದು. ನಾನೇ ಒಂದು ಗ್ರಾಮದಲ್ಲಿ 8 ವರ್ಷಗಳವರೆಗೆ ಚೇರ್‌ಮನ್ ಆಗಿದ್ದೆ. ಏನು ಈ ಬೋರ್ಡುಗಳು ಇವೆಯೋ ಅದಕ್ಕಿಂತ ಉತ್ತಮವಾದ ವ್ಯಕ್ತಿಗಳು ರೂರಲ್ ಡೆವಲಪ್‌ಮೆಂಟ್ ಬೋರ್ಡ್‌ನಲ್ಲಿ ಇದ್ದಾರೆ. ನಾಲ್ಕಾರು ವ್ಯಕ್ತಿಗಳಿಗೋಸ್ಕರವಾಗಿ ಇಂತಹ ಬೋರ್ಡುಗಳನ್ನು ಮಾಡಕೂಡದು ಎಂಬುದಾಗಿ ಹೇಳುವುದು ಅದು ಸಾಧುವಲ್ಲ. ಬೆಂಗಳೂರು ಮತ್ತು ಮೈಸೂರುಗಳಲ್ಲಿರತಕ್ಕ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡುಗಳಲ್ಲಿ 1952 ನೇ ಇಸವಿಯಲ್ಲಿ ಒಂದೆರಡು ವರ್ಷಗಳ ಕಾಲ ಇದ್ದೆ. ಆದರೆ ಬೆಂಗಳೂರಿನಲ್ಲಿ ಅಗಾಧವಾದ ಕೆಲಸಗಳು ನಡೆದಿವೆ ಎಂಬುದಾಗಿ ನಾನು ಹೆಮ್ಮೆಯಿಂದ ಹೇಳುತ್ತೇನೆ. ಅಲ್ಲಿ ಮುನಿಸಿಪಾಲಿಟಿಯವರೂ ಸಹ ಕೆಲಸಮಾಡುತ್ತಾ ಇದ್ದರು. ಎಚ್. ಎ. ಎಲ್. ಗೆ ಕಾರ್ಮಿಕವರ್ಗದವರು ಬೆಂಗಳೂರಿನ ಮಧ್ಯೆ ಹಾದು ಹೋಗಬೇಕಾಗಿದೆ. ಬೆಂಗಳೂರಿನಲ್ಲಿಯೇ

(ಶ್ರೀ ಎಂ. ಬಸವರಾಜು)

ಚಟುವಟಿಕೆ ಹೆಚ್ಚಿಗೆ ಕಾಣುತ್ತಿದೆ. ಬೋರ್ಡಿನಲ್ಲಿ ಕೆಲವು ವ್ಯಕ್ತಿಗಳೂ ಕೂಡ ಅಧಿಕಾರಿಗಳ ಜೊತೆ ಸೇರಿಸಿಕೊಂಡಿದ್ದಾರೆ. ಖಾಸಗೀ ವ್ಯಕ್ತಿಗಳೂ ಇದ್ದಾರೆ. ಅವರು ಸತ್ಯ ಹರಿಶ್ಚಂದ್ರರೆಂದು ಹೇಳುವುದಕ್ಕಾಗುವುದಿಲ್ಲ. ಅಂತಹ ವ್ಯಕ್ತಿಗಳಿಗೆ ಕಾನೂನು ಭೀತಿಯಿಲ್ಲ ಶಿಕ್ಷೆಮಾಡುವುದಕ್ಕೆ ಹಲವಾರು ಕಾನೂನುಗಳಿವೆ. ಅದನ್ನು ಉಪಯೋಗಿಸಿ ತಪ್ಪಿತಸ್ಥರನ್ನು ತಹಬಂದಿಗೆ ತಂದು ಆ ಏರಿಯಾವನ್ನು ಇಂಪ್ರೂವ್ ಮಾಡಬೇಕು.

ಇನ್ನು ಬೆಟರ್‌ಮೆಂಟ್ ಲೆವಿ ವಿಷಯ. ವ್ಯಾಲ್ಯುಯೇಷನ್ ಇದರಲ್ಲಿ ಏನಾಗುತ್ತದೋ ಅದರ ಮೂರನೇ ಒಂದು ಭಾಗ ಹಾಕುವುದು ಸರಿಯಿಲ್ಲ. ಲೇಔಟಿಗೆ ಏನು ಖರ್ಚಾಗುತ್ತದೋ ಅದರ ಮೇಲೆ ಮೂರನೇ ಒಂದು ಭಾಗ ಅಥವಾ ಅದಕ್ಕಿಂತ ಸ್ವಲ್ಪ ಇಳಿಸಿ ಲೆವಿ ಮಾಡಬೇಕೆಂದು ನಾನು ಹೇಳುತ್ತೇನೆ. ಅಲ್ಲದೆ ಅಲ್ಲಿ ಸರ್ಕಾರದವರು ಚೇರ್‌ಮನ್‌ರನ್ನು ಮತ್ತು ಇಬ್ಬರು ಸದಸ್ಯರನ್ನು ನಾಮಿನೇಟ್ ಮಾಡುತ್ತಾರೆ. ಆ ರೀತಿ ನಾಮಿನೇಟ್ ಮಾಡುವಾಗ ಯಾರು ಕಣ್ಣಿಗೆ ಬಿದ್ದರೂ, ಅವರು ಅಗಾಧವಾಗಿ ಜನಜೀವನದಲ್ಲಿ ನಾಲ್ಕಾರು ವರ್ಷಗಳ ಕಾಲ ಸೇವೆ ಮಾಡಿರುವಂತಹವರನ್ನು ತಪ್ಪದೆ ನಾಮಿನೇಟ್ ಮಾಡುವುದು ಉತ್ತಮ. ಅಂತಹ ಸಲಹೆಗಳನ್ನು ಸರ್ಕಾರದ ಮುಂದೆ ಇಡಬೇಕು. ಟ್ರಸ್ಟ್ ಬೋರ್ಡಿನವರು ಮಾಡಿರುವ ಲೇಔಟ್ ಸ್ಥಳಗಳಿಗೆ ಹೋದರೆ, ವಾಸ ಮಾಡುವ ಜನಗಳಿಗೆ ಚರಂಡಿ ವ್ಯವಸ್ಥೆ ಮತ್ತು ನಲ್ಲಿ ವ್ಯವಸ್ಥೆ, ಬೆಳಕು, ನೀರು ಇಂತಹ ವ್ಯವಸ್ಥೆ ಹಲವಾರು ಭಾಗಗಳಲ್ಲಿ ಇಲ್ಲ.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ನೀವು ಕಾಂಗ್ರೆಸ್ ಪಕ್ಷದಲ್ಲಿದ್ದೀರಿ. ತಾವು ಹೊಸ ಕಾಂಗ್ರೆಸ್‌ನವರು. ಚೆನ್ನಾಗಿ ಮಾತನಾಡಬೇಕು. ನಿಮ್ಮ ಮಾತು ಅವರ ತಲೆಯಮೇಲೆ ಹೊಡೆಯುವಂತೆ ಇರಬೇಕು.

ಶ್ರೀ ಎಂ. ಬಸವರಾಜು.—ನಾನು ಪ್ರತಿಸಲವೂ ಹೇಳುತ್ತಿದ್ದೇನೆ. ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನವರು ಮಾಡಿರುವುದರಲ್ಲಿ ಕುಡಿಯುವುದಕ್ಕೆ ನೀರಿನ ಸೌಕರ್ಯವಿಲ್ಲ, ವಾಸಮಾಡುವುದಕ್ಕೇನೋ ಮನೆಗಳು ಇರಬಹುದು. ವಾಸ ಮಾಡಲು ಅನುಕೂಲವಾಗಿ ನೀರಿನ ಸೌಕರ್ಯ, ಚರಂಡಿ ವ್ಯವಸ್ಥೆ ಇರಬೇಕು. ಆದ್ದರಿಂದ ನಿರ್ದಿಷ್ಟವಾದ ಉದ್ದೇಶವನ್ನು ಈ ಮಸೂದೆಯಲ್ಲಿ ಅಳವಡಿಸಬೇಕು. ಖಾಸಗಿ ವ್ಯಕ್ತಿಗಳೇ ಬೋರ್ಡ್ ಮೆಂಬರ್ಸ್ ಮತ್ತು ಚೇರ್‌ಮನ್ ಆಗಿರುತ್ತಾರೆ. ಅವರು ಹೇಳಿದಂತೆ ಮಾಡದೇ ಇರುವಂತಹವರಿಗೆ ಅವರಲ್ಲಿ ತಪ್ಪು ಇದ್ದರೆ ಅವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಇಂತಹ ವಿಷಯಗಳು ಅಸೆಂಬ್ಲಿಯಲ್ಲಿ ಬರುವಾಗ ಇಲ್ಲಿ ಚುನಾಯಿತ ಸದಸ್ಯರು ಏನು ಇರುತ್ತಾರೆಯೋ ಅವರು ಇದರಲ್ಲಿ ಏನೇನು ತಪ್ಪುಗಳಿವೆ ಎಂಬುದಾಗಿ ಎಕ್ಸ್‌ಪ್ರೆಸ್ ಮಾಡಿದಾಗ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಅಥವಾ ಖಾಸಗಿ ವ್ಯಕ್ತಿಗಳು ಯಾರು ಇರುತ್ತಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳುವ ಸೆಕ್ಷನ್ನನ್ನು ಇಲ್ಲಿ ಇನ್‌ಕಾರ್ಪೊರೇಟ್ ಮಾಡಬೇಕೆಂದು ನಾನು ಸಲಹೆಮಾಡುತ್ತೇನೆ.

ಇನ್ನು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನವರು ಒಂದು ಎಕರೆ ಭೂಮಿಗೆ 6 ಸಾವಿರ ರೂಪಾಯಿಗಳನ್ನು ನಿಗದಿಮಾಡಿದ್ದರೆ, ಕಾರಣಾಂತರಗಳಿಂದ ಕೋರ್ಟಿಗೆ ಏನಾದರೂ ಹೋದರೆ, 12 ಸಾವಿರ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಅವರು ಕೋರ್ಟಿಗೆ ಹೋಗಲು ಅವಕಾಶವಿಲ್ಲದ ಹಾಗೆ ಸೆಲೆಕ್ಟ್ ಕಮಿಟಿಯವರು ವಿಚಾರಮಾಡಬೇಕು. ನನಗೂ ಈ ಬಗ್ಗೆ ಒಂದು ನೋಟೀಸ್ ಕೊಟ್ಟರು. ಯಾವಾಗಲೂ ನಾವು ಲಾ ಅಬೈಡಿಂಗ್ ಸಿಟಿಜನ್ಸ್. ನಾವು ಇಲ್ಲಿ ಇದನ್ನೆಲ್ಲಾ ಮಾಡಿದರೆ ನಾವಾಗಿಯೇ ಕೋರ್ಟಿಗೆ ಜನ ಹೋಗುವುದಕ್ಕೆ ಅವಕಾಶ ಕೊಟ್ಟಹಾಗಾಗುತ್ತದೆ.

ಇನ್ನು ನಾವು ಎಲ್ಲಿ ನೋಡಿದರೂ ಕಳೆದ 20 ವರ್ಷಗಳಲ್ಲಿ ಡೆವಲಪ್‌ಮೆಂಟ್ ಆಕ್ಟ್ ರೂರಲ್ ಮತ್ತು ಅರ್ಬನ್ ಪಾರ್ಟ್ಸ್‌ಗಳಲ್ಲಿ ಜಾರಿಯಲ್ಲಿಲ್ಲ. ಅದು ಆಗುತ್ತಿದೆಂದು ಸುಮ್ಮನೆ ಟೈಮ್ ತೆಗೆದುಕೊಳ್ಳುತ್ತಿದ್ದಾರೆ. ಕೂಲಿಗಾರರು ಅನೇಕರು ಮಡಿಕೆ ಹೊತ್ತುಕೊಂಡು ತಿರುಗುತ್ತಿರುತ್ತಾರೆ. ಅವರುಗಳಿಗೆ ಏನೂ ಅನುಕೂಲಗಳಿರುವುದಿಲ್ಲ. ಈ ಪಂಗಡದವರಿಗೆ ಅನುಕೂಲವಾಗುವಂತೆ ಆ ಏರಿಯಾ ಡೆವೆಲಪ್‌ಮೆಂಟಿನವರು ಶ್ರಮಿಸುತ್ತಾರೆಂದು ನಾನು ನಂಬಿದ್ದೇನೆ. ಅಂತಹವರಿಗೆ ಪ್ರಥಮ ಆದ್ಯತೆ ಸಿಗಲಿಕ್ಕೆ ಒಂದು ಸೂಕ್ತ ವ್ಯವಸ್ಥೆಮಾಡಬೇಕು. ಅದರ ಬಗ್ಗೆ ಇದರಲ್ಲಿ ತಕ್ಕ ಪ್ಲಾನುಗಳನ್ನು ಇನ್‌ಕಾರ್ಪೊರೇಟ್ ಮಾಡಬೇಕೆಂದು ನಾನು ಸಲಹೆಮಾಡುತ್ತೇನೆ. ಯಾವುದಾದರೂ ಒಂದು ಏರಿಯಾವನ್ನು ಡೆವಲಪ್ ಮಾಡುವ ಕಾಲದಲ್ಲಿ ಟ್ರಸ್ಟ್ ಬೋರ್ಡಿನವರು ಒಂದು ಲಾಭದ ದೃಷ್ಟಿಯನ್ನು ಬಿಟ್ಟು 'ನೊ ಲಾಸ್, ನೊ ಪ್ರಾಫಿಟ್' ಬೇಸಿಸ್ ಮೇಲೆ ಒಂದು ಕಾರ್ಯ

ಸೂಚನೆಯನ್ನು ಇಟ್ಟುಕೊಂಡು ಕಾರ್ಯಪ್ರವೃತ್ತರಾಗಬೇಕೆಂದು ನಾನು ಸೂಚಿಸಬಯಸುತ್ತೇನೆ. ಸ್ಥಾನಿಕ ಕ್ಷೇತ್ರದಿಂದ 4 ಜನ ಸದಸ್ಯರನ್ನು ನಾಮಿನೇಟ್ ಮಾಡಬೇಕೆಂದಿದೆ. ಇದು ಟೀಕೆಗೆ ಒಳಗಾಗಿದೆ. ಇದನ್ನು ತಪ್ಪಿಸುವುದಕ್ಕೋಸ್ಕರ 4 ಜನರಿಗೆ ಬದಲು 6 ಜನ ಸದಸ್ಯರನ್ನು ಚುನಾಯಿಸುವುದಕ್ಕೆ ಅವಕಾಶವನ್ನು ಇದರಲ್ಲಿ ಕಲ್ಪಿಸಬೇಕೆಂದು ನಾನು ಸಲಹೆಮಾಡುತ್ತೇನೆ.

ಕೊನೆಯದಾಗಿ ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದಕ್ಕಾಗಿ ನಾನು ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

4-30 P.M.

Sri K. PUTTASWAMY.—The time allotted has been exhausted. I think, the time will have to be extended. The Chair has the power to extended time by an hour.

Mr. SPEAKER.—Yes. The time fixed is over. The Chair does not mind extending it by one hour. Is the House agreable to that ?

HON'BLE MEMBERS.—Yes.

Mr. SPEAKER.—Time is extended by one hour.

† Sri L. SRIKANTAIAH (Nanjangud).–Mr. Speaker Sir, the intention of the Bill appears to be mainly concerning the urban development. Our learned Member Sri Shamanna has warned that we have multiplicity of acts and the action is rather very little on our part. The development contemplated in this Bill is such that if we take the over-all picture of the country, I think, the development schemes is more urgently necessary towards the village parts. Why I am stressing this is that the Government has a different intention about the Town and Country Planning Act. I am sorry to say that I have not studied in detail the provisions of the Act. This Act is a very important Act and while contemplating the various schemes of this Act, they have not taken authority of the principles laid down in the Country and Town Planning Act. We know quite well what is happening throughout the country. Only the development of urban areas is being done. The development scheme is necessary for the town parts--more than that for the village parts. In this context, while drafting a legislation of this type, I request the Hon'ble Minister to adopt principles that are adumbrated in the Town and Country Planning Act that is in force in London. In Western countries they have what is called a Trust Board or Urban Development Board for the purpose of developing town and country sites. I will give a small instance as to what is happening in spite of these Acts. Vacant sites are being abandoned throughout the city of Bangalore. But still valuable agricultural lands are being taken over to form extension. On what ground? I do not know. The Planning Commission is insisting that the valuable agricultural land should not be taken for expansion of city. But we are coming across instances wherein valuable agricultural lands are taken over and those petty land-holders will be left absolutely landless. They are not given any substitute lands. In spite of that there is no lung space in the

(SRI L. SRIKANTAIAH)

City. While adopting schemes, it is absolutely necessary that you must make sure that there are no open spaces in the City excepting the play grounds and parks and then go to the valuable agricultural land. In this connection I wish to say that the principles that are adumbrated in the British Town and Country Planning Act should be followed. That will give us some indication as to how we should proceed to plan. The British Town and Country plan Act vests powers in Urban and Rural Development Boards. There is a Housing Board. It is not formed on the principles of that Country Planning Act. The schemes and plans that are being adpoted by this Board are not correlated with the schemes and plans of the Trust Board. There is no co-ordination between these Boards. The Housing Board is taking up its own scheme and extensions. The Trust Board is doing its own business. In the urban development, before implementing the scheme, sufficient statutory powers will have to be given to these Boards as is being given under Town and Country Planning Act in London. One should have the co-operation of the other. This Bill is going to the Select Committee. Before making any suggestions, the Committee should study the British Act. It is necessary for the Government to provide the provisions for the establishment of Urban Development Boards and more than this, the Village Development Board is necessary. We have been trying to bring to the notice of the Government that the Primary Schools are in most miserable condition and there are no play grounds and there are no hostels for the children. There are Taluk Boards. I wonder whether the development of the village is in consonance with the Town and Country Planning Act. We have no rural development boards. Therefore, may I request the Minister to adopt the same scheme that is being adopted under Town and Country Planning Act? Most of the Cities in Western countries are developed according to provisions of this Act. The City of London has been developed on these lines. More than that the country-side also is being developed. They are giving equal attention for the development of the country side. It cannot be neglected. The villages are the back-bone of this country. That aspect is not at all taken into consideration and in this connection, I wish to state the example just now given, and that is, that we have to know, as to how these Trust Boards are working. I am not going into the details of the finances of the Board. What has happened is it is just like a trading corporation acquiring fine bits of lands on a very low prince and later on selling it at an upset price and making profit out of it. Instead of allotting the sites to the person who is really in need of it and who deserves, you sell it to others at the open market rates and thereby deny the persons who really ask for the sites. My question is that in spite of the so-called Trust Boards existing, how many poor people have been able to get houses in this city of Bangalore? Rich people from outside the State of Mysore could

get sites in Bangalore but those living in Bangalore are made homeless people in Bangalore. Let us come to the Cubbonpet area. See the slums. Why I am drawing attention of the Hon'ble Minister is to ask them, are they ready with the blue-print for developing Mysore and Bangalore or Davanagere? My earnest plea to the Hon'ble Minister is, let us not be in the habit of enacting legislation without bringing any benefit to the people, because the Trust Board is there and the only intention appears to be to have uniform legislation, because some parts of ex-Madras, some parts of ex-Hyderabad and some parts of ex-Bombay have come into one unit, and if the population is 50,000 and above, let us have an urban development Board. If it is merely that, I do not think we have solved the problem. Therefore, let us not duplicate legislation. More than that, there are local authorities and we have town municipalities and City Municipalities and three are the taluk boards which are asked to attend to the development of villages. In all these, there is what is known as consultative capacity. In what way the functions of a taluk board are made inconsonance with the provisions of the Act, I fail to understand. If the intention of the Government is to develop Nanjangud, is this board necessary more than a taluk board? Which function this Board can discharge and which function the taluk board can discharge? What additional plea the Minister has made in this regard? Therefore, my humble request to the Minister is, let there be a blue print in respect of the entire territory of Mysore State and have a legislation based on the British Town and Country Planning Act. In the legislation which we contemplate, let us think of an agency for implementing the broad blue-print given to the Town and Country Planning Board. Otherwise, I do not think this will solve the problem at all. More than that, as Mr. T. R. Shamanna said wherever a duplicate agency comes, we are not achieving any purpose. Let the Hon'ble Minister not mistake me for opposing the Bill. I am also interested in the development of every town and village. But the way in which the Government want to implement the scheme, I am doubtful whether that object can be achieved. In what way the duties under the Town and Country Planning Act are made in consonance with the duties of the Boards in Chapter III? One representative of, Assistant Town Planning Officer is provided. Has it been laid down that before the development under the Urban Development Board is implemented, the sanction of the Town Planning Authority should be taken? Nowhere is it mentioned. Only consultative opinion is taken. The Director is made a representative under this Act. As against the majority opinion, his opinion will be drowned. In spite of so much having been spent, still we find slums abounding in the City of Bangalore.

Therefore, let us have a proper legislation. Tighten the provisions contained in the Town and Country and Planning Act.

Sri K. PUTTASWAMY.—Please read clause 14 proviso.

Sri L. SRIKANTAIAH.—Yes I have read :

> " Provided that the schemes of the Board referred to in clause (*a*) of sub-section (1) and in sub-section (2) shall be prepared in conformity with the outline Development Plan or Comprehensive Development Plan of the Planning Authority of the area concerned.

But have you got a blue-print ?

Sri K. PUTTASWAMY.—It presupposes that there will be a blue-print.

Sri L. SRIKANTAIAH.—If this proviso presupposes the existence of a blue-print, is it necessary that recommendations should be followed ? There are the over-riding powers of the Board and you may turn down the recommendations of the Town and Country Planning authority. I have read the Act cursorily. 'In conformity' means 'in consultation'. It is not mandatory. I am equally interested not only in the development of urban areas, and more than that, development of villages also. Therefore, I request the Hon'ble Minister when this Bill goes to the Joint Select Committee, the provisions contained in the Town and Country Planning Act should be implemented for the development of Towns and villages.

† ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಮಾನ್ಯ ಅಧ್ಯಕ್ಷರೇ, ಈ ಮಸೂದೆಯ ಬಗ್ಗೆ ಈಗ ಮಾತನಾಡಿದಂತಹ ಕೆಲವು ಮಾನ್ಯ ಸದಸ್ಯರುಗಳು ಇದರ ಔಚಿತ್ಯವನ್ನು ಕುರಿತು ಪ್ರಶ್ನಿಸಿದ್ದಾರೆ. ಇದಕ್ಕೆ ಅವರು ಹೇಳತಕ್ಕ ಕಾರಣಗಳು ಎಂದರೆ ಡೂಪ್ಲಿಕೇಷನ್ ಆಫ್ agencies ಆಗುತ್ತೆ ಎಂದು. ಈಗ ಲೋಕಲ್ ಬಾಡೀಸ್ ಹಾಗೂ ಪಂಚಾಯತಿ ಸಂಸ್ಥೆಗಳು, ತಾಲ್ಲೂಕಾ ಬೋರ್ಡುಗಳು ಮತ್ತು ಇನ್ನೂ ಇತರ ವಗೈರೆ ಸಂಸ್ಥೆಗಳು ಇವೆ ಎಂದು ಹೇಳಿದ್ದಾರೆ. ನನಗನಿಸುವುದು ಇದರಲ್ಲಿ ಡೂಪ್ಲಿಕೇಷನ್ ಆಫ್ ಅಥಾರಿಟೀಸ್ ಎಲ್ಲ ಸಂಸ್ಥೆಗಳಿಗೂ ಆಗುವುದಿಲ್ಲ. ಇದನ್ನು ನಾವು ಇಲ್ಲಿ ಯೋಚನೆ ಮಾಡಬೇಕು. ಇದೊಂದು ಹೊಸ ಬೋರ್ಡಿಗಾಗಿ ಬಂದಿರುವ ಮಸೂದೆ. ಬೆಂಗಳೂರು ನಗರದಲ್ಲಿ ಸಿಟಿ ಇಂಪ್ರೂವ್‌ಮೆಂಟು ಟ್ರಸ್ಟು ಬೋರ್ಡು ಎಂದು ಇದೆ. ಇದಕ್ಕೆ ಬೇಕಾದ ಆಕ್ಟು ಇದೆ ಬೆಂಗಳೂರು ಕಾರ್ಪೊರೇಷನ್ ಆಕ್ಟು ಇದೆ. ಇವೆರಡರಲ್ಲೂ ಡ್ಯೂಪ್ಲಿಕೇಷನ್ ಆಫ್ agencies ಎನ್ನುವುದು ಇಲ್ಲ ಹಾಗೇ ಲೋಕಲ್ ಬಾಡೀಸ್, ಮುನಿಸಿಪಾಲಟಿಗಳು, ತಾಲ್ಲೂಕಾ ಬೋರ್ಡುಗಳು ಹಾಗೂ ವಿಲೇಜು ಪಂಚಾಯತಿಗಳು ಇವೆ. ಇವು ಒಂದಕ್ಕೊಂದಕ್ಕೆ ಸಂಬಂಧವೇ ಇಲ್ಲ. ಇಲ್ಲಿ ಕಾನೂನು ಇರತಕ್ಕದ್ದು ಮೈಸೂರು ಅರ್ಬನ್ ಡೆವಲಪ್‌ಮೆಂಟು ಬೋರ್ಡು ಆಕ್ಟ್ ಎಂದು. ಅರ್ಬನ್ ಏರಿಯಾ ಯಾವುದು ಎನ್ನುವುದನ್ನು ಡೆಫನಿಷನ್‌ನಲ್ಲಿ ಡಿಫೈನ್ ಮಾಡಲಾಗಿದೆ. ಆದುದರಿಂದ ಈ ಕಾನೂನು ಯಾವ ಯಾವ ಪ್ರದೇಶದಲ್ಲಿ ಅಗತ್ಯವಿದೆಯೋ ಅದನ್ನು ಇದರಲ್ಲಿ ಸೂಚಿಸಿದ್ದಾರೆ. ಇಂತಹ ಅರ್ಬನ್ ಏರಿಯಾಕ್ಕೆ ಅನ್ವಯಿಸುವಂತಹ ಕಾನೂನನ್ನು ಯಾವ ಪಂಚಾಯತಿಗಳಿಗೂ ಅನ್ವಯಿಸುವುದಕ್ಕೆ ಸಾಧ್ಯವೇ ಇಲ್ಲ ಮತ್ತು ಇದಕ್ಕೆ ಯಾವ ರೀತಿಯಲ್ಲೂ ಸಂಬಂಧಪಡುವುದಿಲ್ಲ. ತಾಲ್ಲೂಕಾ ಬೋರ್ಡುಗಳು ಹಾಗೂ ಮುನಿಸಿಪಾಲಟಿಗಳಿಗೆ ಬೇರೆ ಬೇರೆ ಕಾನೂನುಗಳಿವೆ. ಈ ಬಿಲ್ಲಿನಲ್ಲಿ ಆಲೋಚನೆ ಮಾಡಿರತಕ್ಕ ಕೆಲಸಗಳೇ ಬೇರೆ, ಅವುಗಳ ಕೆಲಸಗಳೇ ಬೇರೆ. ಇದಕ್ಕೂ ಅದಕ್ಕೂ ಸಂಬಂಧ ಇಲ್ಲ. ತಾಲ್ಲೂಕಾ ಬೋರ್ಡುಗಳ ಕೆಲಸಕಾರ್ಯಗಳೇ ಬೇರೆ ಈ ಬಿಲ್ಲಿನಲ್ಲಿ ಹೇಳಿರುವ ಕೆಲಸ ಕಾರ್ಯಗಳೇ ಬೇರೆ. ಇದಕ್ಕೂ ಅದಕ್ಕೂ ಸಂಬಂಧವಿಲ್ಲ. ಟೌನು ಮುನಿಸಿಪಾಲಟಿ ಆಕ್ಟು ಪ್ರಕಾರ ಅನೇಕ ಕಾರ್ಯಗಳು ಬರುತ್ತವೆ. ಇದನ್ನು ಇಲ್ಲಿ ಹೇಳುತ್ತಿಲ್ಲ. ಟೌನು ಮುನಿಸಿಪಾಲಟೀಸ್‌ಗಳಿಗೂ ಲೋಕಲ್ ಬಾಡೀಸ್‌ಗಳಿಗೂ ಇದರಲ್ಲಿ ಸಂಬಂಧ ತರಬೇಕಾಗಿಲ್ಲ. ಇದರಲ್ಲಿ ಹೇಳಿರುವಂತೆ ಈ ಬೋರ್ಡು ಯಾವ ರೀತಿ ಇರಬೇಕು ಮತ್ತು ಇದರ ಕೆಲಸಗಳು ಹೇಗೆ ಇರಬೇಕು ಎನ್ನುವುದನ್ನು ಇದರಲ್ಲಿ ಹೇಳಲಾಗಿದೆ. ಯಾವ ಯಾವ ಸಂದರ್ಭಗಳಲ್ಲಿ ಇದರಲ್ಲಿ ಅನುಕೂಲಗಳನ್ನು ಕಲ್ಪಿಸಿಕೊಡಬೇಕು ಎನ್ನುವುದೇ ಇದರಲ್ಲಿ ನಮೂದಾಗಿವೆ. ಮತ್ತು ಮುನಿಸಿಪಲ್ ಬಾಡಿ ಎನ್ನುವ ಒಂದು ಕ್ಷೇತ್ರದಲ್ಲಿ ಇದರ ವ್ಯಾಪ್ತಿ ಹೇಗಿರಬೇಕು ಎನ್ನುವುದ

ನ್ನೆಲ್ಲಾ ಯೋಚಿಸಿ ಇವರಲ್ಲಿ ಮಾಡಿರುತ್ತಾರೆ. ಇದರಲ್ಲಿ ಕಡಾರಿಗಳು ಬಂದು ಹೇಗೆ ಕೆಲಸ ಮಾಡುವುದಕ್ಕೆ ಸಾಧ್ಯ? ನನಗೆ ತಿಳಿದಿರುವ ಹಾಗೆ ಯಾವುದೇ ಮುನಿಸಿಪಾಲಿಟಿಯಾಗಲೀ ಹೊಸ ದಾಗಿ ಅಧಿಕಾರಕ್ಕೆ ಬರುವಾಗ ಇಲ್ಲಿರುವ ಕಾನೂನುಗಳ ಚೌಕಟ್ಟಿನಲ್ಲಿಯೇ ಇದ್ದು ಕೆಲಸ ಮಾಡ ಬೇಕಾಗುತ್ತದೆ. ಸರಕಾರ ತಮಗೆ ಅಧಿಕಾರ ಕೊಟ್ಟಿದೆ ಎಂದು ತಮಗೆ ತೋಚಿದಂತೆ ಮಾಡುವುದಕ್ಕಲ್ಲ. ಆ ಹೌಸಿಂಗ್ ಬೋರ್ಡಿಗೂ ಇವಕ್ಕೂ ಏನು ಸಂಬಂಧ ಇರಬೇಕು, ಹಿಂದೆ ಹೌಸಿಂಗ್ ಬೋರ್ಡ್ ಏನು ಕೆಲಸ ಮಾಡುತ್ತಿತ್ತು, ಈಗ ಅದಕ್ಕೂ ಇದಕ್ಕೂ ಏನು ಸಂಬಂಧ ಇರಬೇಕು ಎಂಬುದನ್ನು ನಾವು ನೋಡಬೇಕಾಗಿದೆ. ಆದರೆ ಕಾರ್ಪೊರೇಷನ್ನಿಗೇ ಈ ಕಾರ್ಯ ಗಳನ್ನೆಲ್ಲ ಬಿಡಬೇಕು ಎಂಬ ವಾದವನ್ನು ನಾನು ಒಪ್ಪಲಾರೆ. ಅದು ವಾದಗ್ರಸ್ತ ವಿಷಯ. ಈ ದಿವಸ ಬೊಂಬಾಯಿನಲ್ಲಿ ಕಾರ್ಪೊರೇಷನ್‌ನವರು ಒಂದು ವಾಹನ ಕಾರ್ಪೊರೇಷನ್ನನ್ನೂ ನಡೆಸುತ್ತಿದ್ದಾರೆ. ಅದರಂತೆ ಇಲ್ಲಿ ನಮ್ಮ ಕಾರ್ಪೊರೇಷನ್ನಿಗೂ ಹಾಗೆ ಅವಕಾಶ ಕೊಡಿ ಎಂದರೆ ಅದು ಸಾಧ್ಯವಾಗುತ್ತದೆಯೇ? ಹಿಂದೇ ನಾನೇ ಒಂದಾವರ್ತಿ ಬೆಂಗಳೂರು ಕಾರ್ಪೊರೇಷನ್ ಅವರನ್ನು ಈ ಬೆಂಗಳೂರು ಟ್ರಾನ್ಸ್‌ಪೋರ್ಟ್ ಸರ್ವಿಸನ್ನು ನೀವೇ ವಹಿಸಿಕೊಳ್ಳಿ ಎಂದು ಹೇಳಿದ್ದೆ. ಅದಕ್ಕೆ ಸಾಧ್ಯವಿಲ್ಲ ಎಂದು ಹೇಳಿ ಅವರೇ ಒಪ್ಪಲಿಲ್ಲ. ಆದರೆ ಈ ದಿವಸ ಅವರು ಆ ಬಾಬಿನಲ್ಲಿ ಬರತಕ್ಕ ರಾಯಲ್ಟಿಯಲ್ಲಿ ಸ್ವಲ್ಪ ಪಾಸ್ತಿ ಕೊಡಿ ಎಂದು ಕೇಳುತ್ತಿದ್ದಾರೆ. ಸರ್ಕಾರ ಅದನ್ನು ಕೊಟ್ಟರೂ ಕೊಡಬಹುದು. ಅದು ಬೇರೆ ವಿಷಯ. ಆದ್ದರಿಂದ ಎಲ್ಲ ಕೆಲಸಗಳನ್ನೂ ಕಾರ್ಪೊರೇ ಷನ್ ಮೂಲಕವೇ ನಡೆಸಬೇಕು ಎಂಬುದನ್ನು ನಾನು ಒಪ್ಪುವುದಿಲ್ಲ. ನಮ್ಮ ಹೌಸಿಂಗ್ ಬೋರ್ಡ್ ಇಲ್ಲಿಯವರೆಗೂ ಸಂಸ್ಥಾನದಲ್ಲಿ ಎಲ್ಲೋ ಒಂದೆರಡು ಕಡೆ ಕೆಲಸ ಮಾಡುತ್ತಿತ್ತು. ಅದನ್ನು ಈಗ ಸಂಸ್ಥಾನದ ಎಲ್ಲ ಕಡೆಗಳಲ್ಲಿಯೂ ಕೆಲಸ ಮಾಡುವಂತೆ ಮಾಡಿ ಅದಕ್ಕೆ ಈ ದಿವಸ ಲೇಔಟ್ ಮಾಡತಕ್ಕ ಮತ್ತು ಕಟ್ಟಡಗಳನ್ನು ಕಟ್ಟತಕ್ಕ ಎಲ್ಲ ಅಧಿಕಾರಗಳನ್ನೂ ಕೊಡಲಾಗಿದೆ. ಆದರೆ ಹಾಗೆ ಲೇಔಟ್ ಮಾಡತಕ್ಕ ಅಧಿಕಾರ ಇದ್ದರೂ ಅದಕ್ಕೆ ಜಮೀನನ್ನು ಅಕ್ವಯರ್ ಮಾಡತಕ್ಕ ಅಧಿಕಾರ ಆಕ್ಟಿನಲ್ಲಿ ಇದೆಯೇ ಎಂಬುದನ್ನು ನೋಡಬೇಕು. ಆದರೆ ಟ್ರಸ್ಟ್ ಬೋರ್ಡಿಗೇನೋ ಈ ಎಲ್ಲಾ ಅಧಿಕಾರಗಳೂ ಇವೆ. ಆದರೆ ಇತ್ತೀಚೆಗೆ ಹೌಸಿಂಗ್ ಬೋರ್ಡ್ ಜಾರಿಗೆ ಬಂದಮೇಲೆ ಆ ಟ್ರಸ್ಟ್ ಬೋರ್ಡ್ ಏನಿದ್ದರೂ ಲೇಔಟುಗಳನ್ನು ಮಾಡಿ ಅವುಗಳನ್ನು ಹರಾಜ್ ಮೂಲಕ ಜನರಿಗೆ ಹಂಚುವುದಷ್ಟೇ ಅದರ ಕೆಲಸವಾಗಿದ್ದರೆ ಸರಿಹೋಗುತ್ತಿತ್ತು. ಆದರೆ ಈ ದಿವಸ ಅದಕ್ಕೂ ಮನೆ ಗಳನ್ನು ಕಟ್ಟುವ ಅವಕಾಶವಿದೆ. ಆದ್ದರಿಂದ ಇಲ್ಲಿ ಆ ಅಧಿಕಾರಗಳು ಒಂದಕ್ಕೊಂದು ಓವರ್ ಲ್ಯಾಪಾಗತಕ್ಕ ಸಂದರ್ಭ ಇದೆ. ಆದರೆ ನನಗೆ ತಿಳಿದಮಟ್ಟಿಗೂ ಟ್ರಸ್ಟ್ ಬೋರ್ಡಿಗೆ ಇತ್ತೀಚೆಗೆ ಆ ಮನೆಗಳನ್ನು ಕಟ್ಟತಕ್ಕ ಅಧಿಕಾರವಿಲ್ಲ ಎಂದು ತಿಳಿದುಕೊಂಡಿದ್ದೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಮೈಸೂರಿನಲ್ಲಿ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಅವರ ಒಂದು ಹೌಸ್ ಬಿಲ್ಡಿಂಗ್ ಫಂಡಿದೆ. ಅದು ರಿವಾಲ್ವಿಂಗ್ ಫಂಡ್. ಆ ಫಂಡಿನಿಂದ ಹಿಂದಿನಿಂದಲೂ ಮನೆಗಳನ್ನು ಕಟ್ಟುವುದು, ಹಾಗೆ ಕಟ್ಟಿದ ಮನೆಗಳನ್ನು ಹಿಂದೆಲ್ಲಾ 1,500 ರೂಪಾಯಿಗೆ ಒಂದರಂತೆ ಮಾರಾಟ ಮಾಡಲಾಗುತ್ತಿತ್ತು. ಆ ಮಾರಾಟದಿಂದ ಬಂದ ಹಣವನ್ನು ಮತ್ತೆ ಮನೆಗಳನ್ನು ಕಟ್ಟಲು ಉಪಯೋಗ ಮಾಡುವುದು ಹೀಗೆ ಅದು ಹಿಂದಿನಿಂದಲೂ ನಡೆಸಿಕೊಂಡು ಬಂದಿದೆ.

ಶ್ರೀ ಡಿ. ದೇವರಾಜ ಅರಸ್.—ಮೈಸೂರು ಸಿಟಿಗೆ ಹೌಸಿಂಗ್ ಬೋರ್ಡ್ ಬಂದದ್ದು 1952 ರಲ್ಲಿ. ಹಿಂದೆ ಒಂದಾನೊಂದು ಕಾಲಕ್ಕೆ ಬೆಂಗಳೂರಿನಲ್ಲೂ ಆ ಟ್ರಸ್ಟ್ ಬೋರ್ಡನ್ನು ರಚಿಸಿದ ಕಾಲಕ್ಕೆ ಆಗ ಇಲ್ಲಿಯೂ ಹೌಸಿಂಗ್ ಬೋರ್ಡ್ ಎನ್ನುವುದು ಇರಲಿಲ್ಲ. ಅದಕ್ಕೂ ಹಿಂದೆ ಇಲ್ಲಿ ಮನೆಗಳನ್ನು ಕಟ್ಟಬೇಕು ಎಂದರೆ ನಿವೇಶನಗಳೇ ಸಿಕ್ಕುತ್ತಿರಲಿಲ್ಲ. ಅಂಥ ಪರಿಸ್ಥಿತಿ ಉಂಟಾದ್ದರಿಂದ ಇಲ್ಲಿ ಟ್ರಸ್ಟ್ ಬೋರ್ಡನ್ನು ರಚಿಸಬೇಕಾಯಿತು. ಆದರೆ ಈ ದಿವಸ ನಮ್ಮ ಸಭೆಯ ಮುಂದೆ ಮಂಡಿಸಿರ ತಕ್ಕ ಬಿಲ್ಲನ್ನೂ ಮತ್ತು ಹೌಸಿಂಗ್ ಬೋರ್ಡ್ ಆಕ್ಟನ್ನೂ ಈ ಎರಡನ್ನೂ ನಾವು ಹೋಲಿಕೆ ಹಾಕಿ ನೋಡಿದರೆ, ನಾವು ಎಲ್ಲೆಲ್ಲಿ ಹೊಸದಾಗಿ ಲೇಔಟ್‌ಗಳನ್ನು ಮಾಡುತ್ತೇವೋ ಅಲ್ಲೆಲ್ಲಾ ಯಾವ ಪ್ರಮಾಣದಲ್ಲಿ ನಿವೇಶನಗಳನ್ನು ಹೌಸಿಂಗ್ ಬೋರ್ಡಿಗೆ ಮೀಸಲಾಗಿಡುತ್ತೇವೋ ಅದೇ ಪ್ರಮಾಣದಲ್ಲಿ ಅರ್ಬನ್ ಡವಲಪ್‌ಮೆಂಟ್ ಬೋರ್ಡಿಗೂ ಮೀಸಲಾಗಿಡಬೇಕು ಹಾಗೆ ಮಾಡುವುದು ಸೂಕ್ತ ಎಂದು ಹೇಳುತ್ತೇನೆ.

Sri L. SRIKANTAIAH.—You said that the Municipal area is concerned, with the territorial jurisdiction but the Board has not got that limitation. You please see the definition of 'urban area'. After all,

(SRI L. SRIKANTAIAH)

the areas comprise from point A to point B. The Board's territorial jurisdiction is much more than the municipal area. What is the jurisdiction of the Board as contemplated in section of the Act:

"area consisting population of 50,000 or more and includes an area with population of less than 50,000.".

Sri D. DEVARAJ URS.—If you want to develop that particular area, they go beyond the municipal limits. The Board need not confine itself to any particular area within the Municipal limits. To give one example, the City Improvement Trust Board has been given the authority to go outside the Municipal limits for the purposes of acquiring new lands. All these powers are given to these boards here. ಹಾಗೆ ಇರುವುದರಿಂದ ಅವರು ಏನು ಮಾಡಬೇಕಾದರೂ ಅವರು ಸರ್ಕಾರಕ್ಕೆ ಬರೆಯಲೇಬೇಕು.

ಶ್ರೀ ಎಂ. ನಾಗಪ್ಪ.—ಇಲ್ಲಿಯೂ ಕೂಡ ಸರ್ಕಾರಕ್ಕೆ ಬರೆಯಲೇಬೇಕು ಇಲ್ಲ ವಿತ್ ದಿ ಅಪ್ರೂವಲ್ ಆಫ್ ದಿ ಗೌರ್ನಮೆಂಟ್ ಎಂದು ಹೇಳಲಾಗಿದೆ.

†**ಶ್ರೀ ಡಿ. ದೇವರಾಜ ಅರಸ್.**—ಅವರು ಸರ್ಕಾರಕ್ಕೆ ನೇರವಾಗಿ ಬರೆದು ಅದನ್ನು ಮಾಡಿಕೊಳ್ಳಬೇಕು. ಈ ಹಿಂದೆ ಹೌಸಿಂಗ್ ಬೋರ್ಡ್ ರಚನೆಯಾದ ಕಾಲಕ್ಕೆ ಮನೆಗಳನ್ನು ಕಟ್ಟಲು ಅವರಿಗೆ ನಿವೇಶನಗಳೇ ಸಿಕ್ಕುತ್ತಿರಲಿಲ್ಲ. ಜಮೀನನ್ನು ಅಕ್ವಯರ್ ಮಾಡುವುದಕ್ಕೆ ಆಗಲಿ ಲೇಔಟ್ ಮಾಡುವುದಕ್ಕೆ ಆಗಲಿ ಹೌಸಿಂಗ್ ಬೋರ್ಡಿಗೆ ಅಧಿಕಾರವಿಲ್ಲ. ಸಾಲದ್ದಕ್ಕೆ ಆಗ ಟ್ರಸ್ಟ್ ಬೋರ್ಡಿನವರಾಗಲೀ ಕಾರ್ಪೊರೇಷನ್ನಿನವರಾಗಲೀ ಯಾರೂ ಮನೆಗಳನ್ನು ಕಟ್ಟಲು ಆ ಹೌಸಿಂಗ್ ಬೋರ್ಡಿಗೆ ನಿವೇಶನಗಳನ್ನು ಒದಗಿಸಲಿಲ್ಲ. ಆಗ ಅದು ಅಕ್ಕಪಕ್ಕದಲ್ಲಿರತಕ್ಕವರನ್ನು ಕೇಳಿ ನಿವೇಶನಗಳನ್ನು ಪಡೆದು ಮನೆಗಳನ್ನು ಕಟ್ಟಬೇಕಾಯಿತು. ಇಂಥಾ ವಿಚಾರಗಳನ್ನೆಲ್ಲಾ ನಾವು ನಮ್ಮ ಅನುಭವದಲ್ಲಿ ಕಂಡಿದ್ದೇವೆ. ಈ ಅರ್ಬನ್ ಡೆವಲಪ್‌ಮೆಂಟ್ ಬೋರ್ಡ್ ಜಾರಿಗೆ ಬಂದರೆ ಆ ಕೆಲಸಗಳನ್ನೆಲ್ಲಾ ಇದು ತ್ವರಿತವಾಗಿ ಮಾಡುವುದಕ್ಕೆ ಒಂದು ಅವಕಾಶವಾಗುತ್ತದೆ. ಆದರೆ ಈ ದಿವಸ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಕಾರ್ಪೊರೇಷನ್‌ಗಳು ಇರುತ್ತವೆ. ಅವುಗಳಿಗೇ ಈ ಕೆಲಸವನ್ನೂ ವಹಿಸಬಹುದಾಗಿತ್ತಲ್ಲ ಎಂದು ಕೆಲವರ ವಾದ. ಈ ದಿವಸ ನಾವು ಆ ವಾಟರ್ ಸೂಯರೇಜ್ ಬೋರ್ಡನ್ನು ಮತ್ತು ಸ್ಟೇಟ್ ಟ್ರಾನ್ಸ್‌ಪೋರ್ಟ್ ಕಾರ್ಪೊರೇಷನ್ ಮಾಡಿರೋ ಹಾಗೆ ಇದನ್ನೂ ಮಾಡಬಹುದಾಗಿತ್ತಲ್ಲ ಎಂದು ಕೆಲವರು ವಾದ ಮಾಡುತ್ತಿದ್ದಾರೆ. ಅಷ್ಟೇ ಅಲ್ಲದೆ ಈ ಅರ್ಬನ್ ಡೆವಲಪ್‌ಮೆಂಟ್ ಬೋರ್ಡನ್ನು ಮಾಡುವುದರಿಂದ ಈ ಕಾರ್ಪೊರೇಷನ್ ಅಧಿಕಾರ ವ್ಯಾಪ್ತಿಯನ್ನು ಮೊಟಕು ಮಾಡಿದ ಹಾಗೆ ಆಗುತ್ತದೆಂದು ಹೇಳುತ್ತಿದ್ದಾರೆ. ಮೇಲಾಗಿ ಈ ದಿವಸ ಅರ್ಬನ್ ಡೆವಲಪ್‌ಮೆಂಟ್ ಬೋರ್ಡಿಗೆ ಕೊಡತಕ್ಕ ಅಧಿಕಾರಗಳೇನಿವೆ ಅವನ್ನು ನಗರ ಕಾರ್ಪೊರೇಷನ್‌ಗಳಿಗೇ ಕೊಡಬಹುದಾಗಿತ್ತಲ್ಲಾ ಏಕೆ ಅದನ್ನು ಮಾಡಲಿಲ್ಲಾ ಎಂದು ಕೆಲವು ಆಕ್ಷೇಪಣೆಗಳನ್ನೂ ಎತ್ತಿದ್ದಾರೆ.

ಇದನ್ನು ಕಾನೂನಿನಲ್ಲಿ ಅಳವಡಿಸುವುದು ನ್ಯಾಯ, ಹಾಗೆ ಇಲ್ಲದೇ ಇದ್ದರೆ ಅಲ್ಲಿ ಒಬ್ಬ ಚೇರ್ಮನ್ ಇದ್ದು, ಇಲ್ಲಿ ಒಬ್ಬ ಚೇರ್ಮನ್ ಇದ್ದರೆ ಲೋಕಲ್ ಇಂಟರೆಸ್ಟ್, ವೆಸ್ಟೆಡ್ ಇಂಟರೆಸ್ಟ್ ಇದರಿಂದಾಗಿ ಘರ್ಷಣೆ ಬಂದು ಕೆಲಸ ಕಾರ್ಯಗಳು ನಡೆಯುವುದು ಕಷ್ಟವಾಗುತ್ತದೆ. ಆದ್ದರಿಂದ ಈ ಬಿಲ್‌ನಲ್ಲಿ ಹೌಸಿಂಗ್ ಬೋರ್ಡು ಯಾವ ಪ್ರಮಾಣದಲ್ಲಿ ಮನೆ ಕಟ್ಟುವುದಕ್ಕೆ — ಲೇ ಔಟ್ ಹಾಕಿದಮೇಲೆ ಅವರಿಗೆ ಬಿಡಬೇಕು ಎಂಬುದನ್ನು ಯೋಚನೆ ಮಾಡಬೇಕು. ಲೇ ಔಟ್ ಮಾಡಿ ಹೌಸಿಂಗ್ ಬೋರ್ಡಿಗೆ ಪೂರ್ತಿ ಮನೆ ಕಟ್ಟುವ ಕೆಲಸವನ್ನು ಬಿಡಿ ಎಂದು ಹೇಳಬಹುದಾಗಿತ್ತು. ಈ ಎರಡು ಕೆಲಸಗಳೂ ಒಂದನ್ನೊಂದು ಹೊಂದಿಕೊಂಡು ಹೋಗಬೇಕಾಗುತ್ತದೆ. ಮನೆಗಳನ್ನು ಕಟ್ಟುವ ವಿಚಾರದಲ್ಲಿ ಸರ್ಕಾರದವರು ಒಂದು ವಿಚಾರವನ್ನು ತೀವ್ರವಾಗಿ ಯೋಚನೆ ಮಾಡಬೇಕಾದ ಪ್ರಸಂಗ ಇದೆ. ಇವತ್ತಿನಿಂದ ಕೆಲವರು ತಮ್ಮ ಶಕ್ತ್ಯಾನುಸಾರ 50 ಸಾವಿರ, ಲಕ್ಷ ರೂಪಾಯಿ ಖರ್ಚು ಮಾಡಿ ಮನೆ ಕಟ್ಟುತ್ತಾರೆ, ಅವರ ಮನೆಯಲ್ಲಿ 500 ಜನ ಇದ್ದಾರೆಯೇ ? ಇಲ್ಲ. ಇಷ್ಟು ದೊಡ್ಡ ಮನೆಗಳನ್ನು ಏಕೆ ಕಟ್ಟಬೇಕು ? ಅನೇಕರು ಕಲ್ಯಾಣ ಮಂಟಪಗಳನ್ನು ಕಟ್ಟಿಸುತ್ತಾರೆ. ಏಕೆ ಎಂದರೆ ಬ್ಲಾಕ್ ಮನಿ ಇಂದ ವೈಟ್

ಮನಿ ಮಾಡಬೇಕಾದರೆ ಇದೂ ಒಂದು ಮಾರ್ಗ ಎಂದು ಅವರು ಹೇಳಿದರು. ಪರಿಸ್ಥಿತಿ ಹೀಗೆ ಇದೆ. ಟ್ಯಾಕ್ಸ್ ಇವೇಡ್ ಮಾಡುವುದಕ್ಕೆ ಈ ರೀತಿ ಎಲ್ಲಾ ಆಗುತ್ತಿದೆ. ಆದ್ದರಿಂದ ಮನೆಗಳನ್ನು ಕಟ್ಟುವಾಗ ಇಷ್ಟು ಪ್ರಮಾಣಕ್ಕಿಂತ ಹೆಚ್ಚು ವಿಶಾಲವಾದ ಮನೆಗಳನ್ನು ಕಟ್ಟಬಾರದು ಎಂದು ನಮ್ಮ ದೇಶದಲ್ಲಿ ಕಾನೂನು ಮಾಡಬೇಕಾದ ಅಗತ್ಯವಿದೆ ಎಂದು ನನ್ನ ಭಾವನೆ. ಅದು ಏನೇ ಇರಲಿ. ಹೌಸಿಂಗ್ ಬೋರ್ಡಿನವರು ಮನೆ ಕಟ್ಟುವುದು ಸರಿಯಾಗಿರುವುದಿಲ್ಲ ಎಂದು ಹೇಳುತ್ತಾರೆ, ಕಂಟ್ರಾಕ್ಟುದಾರರು ಕಟ್ಟುವುದೂ ಕೂಡ ಹಾಗೆಯೇ ಇರುತ್ತದೆ. ಹೌಸಿಂಗ್ ಬೋರ್ಡಿನ ಮುಖಾಂತರ ಮನೆ ಕಟ್ಟುವುದ ರಿಂದ ಎಕನಾಮಿಕಲ್ ಆಗುತ್ತದೆ. ಮತ್ತು ವೀಕರ್ ಸೆಕ್ಷನ್ ಯಾರಿದ್ದಾರೆ ಅವರಿಗೆ ಸ್ವಂತವಾಗಿ ಅವರೇ ಮನೆ ಕಟ್ಟಿಸುವುದಕ್ಕೆ ಶಕ್ತಿ ಇರುವುದಿಲ್ಲ. ಅಂತಹ ಜನರ ಸಲುವಾಗಿ ಹೌಸಿಂಗ್ ಬೋರ್ಡಿನ ವರು ಸೈಟ್ ಕೊಟ್ಟು ಮನೆ ಕಟ್ಟಿಸಿಕೊಡುವುದರಲ್ಲಿ ಏನೇನೂ ತಪ್ಪಿಲ್ಲ. ಇದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗುತ್ತದೆ ಎಂದು ಹೇಳುತ್ತಾ ಇದ್ದೀರಿ, ಹಿಂದೆ ಒಂದು ಸಾರಿ ಈ ಬಿಲ್ಲು ನಮ್ಮ ಮುಂದೆ ಬಂದಿತ್ತು, 1966ನೇ ಇಸವಿಯಲ್ಲಿ ಬಂದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗಿ ಸರಿಯಾದ ಕಾಲ ದಲ್ಲಿ ಬರದೇ ಇದ್ದುದ್ದರಿಂದ ಲ್ಯಾಪ್ಸ್ ಆಯಿತು. ಸೆಲೆಕ್ಟ್ ಕಮಿಟಿಯವರು ಏನು ವರದಿ ಕೊಟ್ಟಿದ್ದಾರೆ ಅದರಂತೆ ಈ ಮಸೂದೆಯನ್ನು ತಂದಿದ್ದೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದನ್ನು ಮತ್ತೊಂದು ಸಾರಿ ಸೆಲೆಕ್ಟ್ ಕಮಿಟಿಗೆ ಕಳುಹಿದರೆ ಒಂದಲ್ಲ ಎರಡು ಸಾರಿ ಚೆನ್ನಾಗಿ ಮತ್ತು ಕೂಲಂಕಷವಾಗಿ ಪರಿಶೀಲನೆ ಮಾಡಿದ ಹಾಗೆ ಆಗುತ್ತದೆ. ಸಂತೋಷ. ಸೆಲೆಕ್ಟ್ ಕಮಿಟಿಯವರು ಇದನ್ನು ನೋಡುವಾಗ ಕೆಲವು ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಹೌಸಿಂಗ್ ಬೋರ್ಡಿನ ಚೇರ್ಮನರು, ಮೆಂಬರುಗಳು ಯಾರಾದರೂ ಆಗಲಿ, ಕೆಲವು ಲೋಕಲ್ ಬಾಡೀಸ್ ಇಂದ ಬಂದಿರತಕ್ಕ ಸದಸ್ಯರು ಅಲ್ಲಿ ಸೇರಿಸುವುದು ಒಳ್ಳೆಯದು ಎಂದು ಹೇಳುತ್ತಾ ಇದ್ದಾರೆ ಅದಕ್ಕೆ ನನ್ನದೇನೂ ಅಭ್ಯಂತರ ವಿಲ್ಲ ಆ ರೀತಿ ಮಾಡಬಹುದು.

ಬೆಟರ್‌ಮೆಂಟ್ ಟ್ಯಾಕ್ಸ್ ವಿಚಾರವಾಗಿ ಮಾತನಾಡುತ್ತಾ ಅನೇಕ ಸ್ನೇಹಿತರು ಇದು ಕೂಡದು ಎಂದು ಹೇಳಿದರು. ಮತ್ತು ಇನ್ನು ಕೆಲವರು ಇದು ಹೆಚ್ಚು ಅಂತಲೂ ಹೇಳಿದರು, ಯಾವ ಆಧಾರ ದಿಂದ ಹೆಚ್ಚು ಎಂದು ಮಾತನಾಡಿದ್ದಾರೆ ಎಂದು ನನಗೆ ನಿಜವಾಗಿಯೂ ಅರ್ಥವಾಗಲಿಲ್ಲ. ಅದಕ್ಕೆ ಆಧಾರವೇನು ? ಒಂದು ವೇಳೆ ಇದು ಕಡಿಮೆ ಎಂದು ನಾನು ಹೇಳಿದರೆ ತಪ್ಪಾಗಲಾರದು ಎಂದು ನನ್ನ ಭಾವನೆ. ಯಾವ ಒಂದು ಪ್ರದೇಶವನ್ನು ಇಂಪ್ರೂವ್‌ಮೆಂಟ್ ಮಾಡಿಯಾದಮೇಲೆ ಅದರ ಬೆಲೆ ಹಿಂದೆ ಇದ್ದುದ್ದಕ್ಕಿಂತಲೂ ಹೆಚ್ಚು ಎಷ್ಟಾಗುತ್ತದೆಯೋ ಅದರ ಮೂರನೇ ಒಂದು ಭಾಗವನ್ನು ಬೆಟರ್ ಮೆಂಟ್ ಟ್ಯಾಕ್ಸ್ ಆಗಿ ತೆಗೆದುಕೊಳ್ಳಬೇಕು ಎನ್ನತಕ್ಕ ಒಂದು ತತ್ವವನ್ನು ಇದರಲ್ಲಿ ನಮೂದಿಸಿದ್ದಾರೆ. ಇದು ಹೆಚ್ಚು ಎಂದು ಏಕೆ ಹೇಳುತ್ತಾರೆ ? ಒಂದು ಎಕರೆ ಪ್ರದೇಶ ಸಾವಿರ, ಎರಡು ಸಾವಿರ ರೂಪಾಯಿ ಬೆಲೆ ಬಾಳತಕ್ಕ ಪ್ರದೇಶವನ್ನು ಟ್ರಸ್ಟ್ ಬೋರ್ಡಿನವರು ತೆಗೆದುಕೊಂಡು ಲೇ ಔಟ್ ಹಾಕಿದರೆ ಅದಕ್ಕೆ ಏಕ್‌ದಂ 10—15 ಸಾವಿರ ರೂಪಾಯಿ ಆಗುತ್ತಾ ಇದೆ. ಬೆಂಗಳೂರಿನಲ್ಲಿ ಕೃಷ್ಣರಾಜೇಂಗಾರ್ ರಸ್ತೆಯನ್ನು ಮಾಡುವಾಗ ಅಲ್ಲಿದ್ದ ಕಟ್ಟಡಗಳನ್ನು ಡಿಮಾಲಿಷ್ ಮಾಡಿದರು ಸರ್ಕಾರದವರು ಯಾವುದೋ ಒಂದು ರೇಟ್ ಕೊಟ್ಟರು, ಅದರ ಮೇಲೆ ಹೈಕೋರ್ಟಿಗೆ ಹೋದಾಗ ಬಹುಶಃ ಚದುರ ಗಜಕ್ಕೆ ಸಾವಿರದಿಂದ ಸಾವಿರದ ರೂಪಾಯಿಗಳವರೆಗೂ ಕೊಟ್ಟರು ಎಂದು ಹೇಳುತ್ತಾರೆ, ನನಗೆ ಸರಿಯಾಗಿ ಗೊತ್ತಿಲ್ಲ, ಈ ರೀತಿ ಯಾವ ಒಬ್ಬ ವ್ಯಕ್ತಿಯು ಸ್ವಂತ ಶಕ್ತಿ ಅಥವಾ ಶ್ರಮದಿಂದ ಆ ಪ್ರದೇಶ ಇಂಪ್ರೂವ್ ಆದುದಲ್ಲ. ಆದರೂ ತನ್ನ ನಿರೀಕ್ಷೆಗೆ ಗೊತ್ತಿಲ್ಲದ ರೀತಿಯಲ್ಲಿ ತನ್ನ ಯಾವುದೇ ಶ್ರಮವಿಲ್ಲದೆ ಸರ್ಕಾರದ ಅಥವ ಸಾರ್ವಜನಿಕರ ಶ್ರಮದಿಂದ ಪರೋಕ್ಷವಾಗಿ ಹೆಚ್ಚಾ ದಂತಹ ಬೆಲೆ ಒಬ್ಬ ವ್ಯಕ್ತಿಗೆ ಹೋಗತಕ್ಕ ಕಾಲದಲ್ಲಿ ಅವನಿಂದ ಬೆಟರ್‌ಮೆಂಟ್ ಲೆವಿ ತೆಗೆದುಕೊಳ್ಳ ಬಾರದು ಎಂದು ಹೇಳುವುದರಲ್ಲಿ ನ್ಯಾಯವೇನಿದೆ ? ಅರ್ಥವೇನಿದೆ ? ಆದ್ದರಿಂದ ಮೂರನೆ ಒಂದು ಭಾಗ ಕೊಡಬೇಕು ಎಂದು ಹೇಳಿ ನಮೂದು ಮಾಡಿರುವುದು ಸೂಕ್ತವಾಗಿದೆ. ಮಾನ್ಯ ಮಂತ್ರಿ ಗಳು ಬೆಟರ್‌ಮೆಂಟ್ ಲೆವಿ ಇದುವರೆಗೂ ಹಾಕಿರುವುದೇ ಹೊರತು ಎಲ್ಲೂ ವಸೂಲಾಗಿಲ್ಲ ಎಂದು ಹೇಳಿದರು, ಇದು ಪಾಶ್ಚಾತ್ತಾಪ ಪಡಬೇಕಾದ ವಿಚಾರ. ಇಷ್ಟೊಂದು ಅನುಕೂಲವಾಗಿದ್ದರೂ ಲೆವಿ ನೆಪಕ್ಕೆ ಮಾತ್ರ ಏಕೆ ಇದೆ ಎಂಬುದನ್ನು ಮಂತ್ರಿಗಳು ಯೋಚನೆಮಾಡಬೇಕು. ಆದುದರಿಂದ ಬೆಟರ್‌ಮೆಂಟ್ ಲೆವಿ ಬಿಡಿ ಎಂದು ಹೇಳಬಹುದು. ಇದಕ್ಕೆ ಅವಕಾಶವಿಲ್ಲದಂತೆ ಕಡ್ಡಾಯವಾಗಿ ಈ ಲೆವಿ ವಸೂಲು ಮಾಡಲೇಬೇಕು. ಛಾರ್ಜ್ ಎಂದು ವಸೂಲುಮಾಡುವುದು ಸೂಕ್ತ, ಅದನ್ನು ವಸೂಲು ಮಾಡಲು ಬೇಕಾದ ಎಲ್ಲಾ ಕ್ರಮಗಳನ್ನೂ ಕೈಕೊಳ್ಳಬೇಕು. ಸೆಲೆಕ್ಟ್ ಕಮಿಟಿಗೆ ಇದು ಹೋಗುವುದರಿಂದ ಹೆಚ್ಚಾಗಿ ಎಲ್ಲಾ ಕಲಮುಗಳ ಬಗ್ಗೆ ಚರ್ಚೆ ಮಾಡಬೇಕಾದ ಅಗತ್ಯವಿಲ್ಲ, ಇದರ ಲ್ಲಡಗಿರುವ ತತ್ವಕ್ಕೆ ಬೆಂಬಲ ಕೊಡಬಹುದು, ಹಾಗೆ ಮಾಡುವುದು ಸೂಕ್ತ, ಬಹುಶಃ ಎಲ್ಲರೂ ಇದನ್ನು ಒಪ್ಪುತ್ತಾರೆ ಎಂದು ಭಾವಿಸಿ ಇದಕ್ಕೆ ನನ್ನ ಬೆಂಬಲವನ್ನು ಕೊಡುತ್ತೇನೆ.

† ಶ್ರೀ ಎಚ್. ಬಿ. ಜ್ವಾಲನಯ್ಯ (ಹಾಸನ).—ಸನ್ಮಾನ್ಯ ಅಧ್ಯಕ್ಷರೇ, ಅರ್ಬನ್ ಡೆವಲಪ್‌ಮೆಂಟ್ ಏನು ನಮ್ಮ ಮುಂದಿದೆ ಅದನ್ನು ಮಂತ್ರಿಗಳು ನಮ್ಮ ಮುಂದಿಟ್ಟು ಪುನರ್ಪರಿಶೀಲನೆಗಾಗಿ ಅದನ್ನು ಸಮಿತಿಗೆ ಕಳುಹಿಸುತ್ತೇವೆಂದು ಹೇಳಿದ್ದಾರೆ, ಅದಕ್ಕೆ ನನ್ನ ಆಕ್ಷೇಪಣೆಯಿಲ್ಲ. ಆದುದರಿಂದ ಇದು ಅಸ್ಥಿರವಾದ ಬಿಲ್ಲು ಎಂದು ಹೇಳಬಹುದು. ಕಾರಣ ಈಗ ಇಡೀ ನಮ್ಮ ರಾಜ್ಯದ ಎಲ್ಲಾ ಪ್ರದೇಶವನ್ನೂ, ಕಾರ್ಪೊರೇಷನ್, ತಾಲ್ಲೂಕುಬೋರ್ಡ್, ಮುನಿಸಿಪಾಲಿಟಿ ಮತ್ತು ಪಂಚಾಯಿತಿ ಇವುಗಳ ವ್ಯಾಪ್ತಿಯಲ್ಲಿರುವುದನ್ನೆಲ್ಲಾ ಇದರ ವ್ಯಾಪ್ತಿಗೆ ತರಲಾಗಿದೆ. ಹೀಗೆ ಮಾಡುವುದರಿಂದ ಅರ್ಬನ್ ಬೋರ್ಡ್ ರಚಿಸುವ ಉದ್ದೇಶವೇನಿದೆ ಅದು ಕೈಗೂಡುತ್ತದೆಯೇ ಎಂದು ನೋಡಬೇಕಾಗಿದೆ. ಕಾರಣವೇನೆಂದರೆ ಈ ಬೋರ್ಡಿನ ಮ್ಯಾನೇಜ್‌ಮೆಂಟ್ ಕಮಿಟಿಯೇನಿವೆ ಅದರಲ್ಲಿ ಇರುವ ಸದಸ್ಯರ ಸಂಖ್ಯೆ 11. ಇದರಲ್ಲಿ ಒಬ್ಬ ಛೇರ್‌ಮನ್ ಸರಕಾರದಿಂದ ನಾಮಿನೇಟ್ ಮಾಡಲ್ಪಟ್ಟಿರುತ್ತಾರೆ, ಮುನಿಸಿಪಲ್ ಚೀಫ್ ಆಫೀಸರು, ಪಬ್ಲಿಕ್ ಹೆಲ್ತ್ ಇಲಾಖೆಯ ಆಫಿಸರು, ಟೌನ್ ಪ್ಲಾನಿಂಗ್ ಇಲಾಖೆಯ ಒಬ್ಬ ಆಫೀಸರು, ಎಗ್ಸಿಕ್ಯುಟಿವ್ ಎಂಜಿನಿಯರು, ಇಬ್ಬರು ಸಂಬಂಧಪಟ್ಟ ಅರ್ಬನ್ ಪ್ರದೇಶದ ನಿವಾಸಿಗಳು, 4 ಜನ ಸ್ಥಳೀಯ ಪ್ರತಿನಿಧಿಗಳು ಲೋಕಲ್ ಅಥಾರಿಟಿಗೆ ಸಂಬಂಧಪಟ್ಟಂಥವರು ಇರುತ್ತಾರೆ. ಈ 11 ಜನರಲ್ಲಿ 7 ಮಂದಿ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳಾಗಿರುತ್ತಾರೆ. ಉಳಿದವರು ಸರಕಾರಿ ಅಧಿಕಾರಿಗಳು. ಬೆಂಗಳೂರು ಕಾರ್ಪೊರೇಷನ್ ಮೈಸೂರು ಮುನಿಸಿಪಾಲಿಟಿ, ಮುಂತಾದುವುಗಳಿಗೆ ಸಂಬಂಧಪಟ್ಟ ಅಧಿಕಾರಿಗಳು, ಎಗ್ಸಿಕ್ಯುಟಿವ್ ಎಂಜಿನಿಯರು, ಪಬ್ಲಿಕ್ ಹೆಲ್ತ್ ಇಲಾಖೆಯವರೊಬ್ಬರು ಹೀಗೆ ಇರುತ್ತಾರೆ. ಇದನ್ನು ನೋಡಿದರೆ ಇಂಥ ಹೊಸ ಸಂಸ್ಥೆಯ ಅವಶ್ಯಕತೆ ಇದೆಯೇ ಅನಿಸುತ್ತದೆ. ಇದನ್ನು ಯೋಚನೆಮಾಡಬೇಕು. ಮುನಿಸಿಪಾಲಿಟಿಯಲ್ಲಿ ಈ ಕೆಲಸ ಮಾಡಬೇಕಾಗಿತ್ತು ಎಂದು ದೇವರಾಜ ಅರಸ್‌ರವರು ಹೇಳಿದರು. ಈಗ ಟೌನ್ ಪ್ಲಾನಿಂಗ್ ಆಕ್ಟ್ ಪ್ರಕಾರ ಪೌರಸಭೆಗಳ ಹೊರವಲಯದ ಸುಮಾರು 2 ಮೈಲಿ ಒಳಗೆ ಒಂದು ಕಟ್ಟಡ ಕಟ್ಟಬೇಕಾದರೆ ಅಥವಾ ಒಂದು ಲೇಔಟ್ ಮಾಡಬೇಕಾದರೆ ಟೌನ್ ಪ್ಲಾನಿಂಗ್ ಆಫೀಸರ ಮತ್ತು ಪುರಸಭೆಯ ಅನುಮತಿ ಪಡೆಯಬೇಕು. ಹಾಗಿರುವಾಗ ಇನ್ನೊಂದು ಏಜೆನ್ಸಿ ಇಷ್ಟು ವೆಚ್ಚದಲ್ಲಿ ಮಾಡಬೇಕೇ ಎಂಬುದನ್ನು ಯೋಚನೆಮಾಡಬೇಕು. ದೊಡ್ಡದೊಡ್ಡ ನಗರಗಳಲ್ಲಿ ಬಡಾವಣೆಗಳನ್ನು ಮಾಡಲು, ಅರ್ಬನ್ ಡೆವಲಪ್‌ಮೆಂಟ್ ವ್ಯವಸ್ಥಿತವಾಗಿ ಮಾಡಲು ಟ್ರಸ್ಟ್ ಬೋರ್ಡ್ ರೀತಿಯ ಒಂದು ಸಂಸ್ಥೆ ಇತ್ತು. ಈಗ 50 ಸಾವಿರ ಜನರಿಗಿಂತ ಹೆಚ್ಚಾಗಿರುವ ಕಡೆ ಕಡ್ಡಾಯವಾಗಿ ಮತ್ತು ಅದಕ್ಕಿಂತ ಕಡಮೆ ಇರುವ ಕಡೆ ಸರಕಾರ ವಿಶೇಷ ರೀತಿಯಲ್ಲಿ ಈ ಬೋರ್ಡ್ ವ್ಯಾಪ್ತಿಯಲ್ಲಿ ವ್ಯವಸ್ಥೆಮಾಡಬೇಕೆಂದು ಯೋಚನೆಮಾಡಿದ್ದಾರೆ. ಮುಖ್ಯವಾಗಿ ಈ ಬೋರ್ಡಿನ ಕಾರ್ಯಕ್ರಮವೇನಿದೆ ಅಂದರೆ ಪೌರಸಭೆಗಳು, ಕಾರ್ಪೊರೇಷನ್‌ಗಳು ಮುಂತಾದವುಗಳ ಪಕ್ಕದಲ್ಲಿ ಇರುವ ಸ್ಥಳಗಳಲ್ಲಿ ಉತ್ತಮವಾದ ಲೇಔಟ್ ಮಾಡಿ ವಿಜ್ಞಾನ ರೀತಿಯಲ್ಲಿ ರಸ್ತೆ ಮತ್ತು ಇತರ ವಿಧವಾದ ಸೌಲಭ್ಯ ಕಲ್ಪಿಸುವುದು. ಈ ಉದ್ದೇಶ ಇರುವಾಗ ಈ ಕೆಲಸವನ್ನು ಕಾರ್ಪೊರೇಷನ್ ಮತ್ತು ಪೌರ ಸಭೆ ಮಾಡಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಯಾವ ಕಾರ್ಪೊರೇಷನ್ ಅಥವಾ ಪೌರಸಭೆಯ ಜ್ಯೂರಿಸ್‌ಡಿಕ್‌ಷನ್ ಪಕ್ಕದಲ್ಲಿರುವ ಸ್ಥಳವನ್ನು ಈ ಶಾಸನದ ವ್ಯಾಪ್ತಿಗೊಳಪಡಿಸಿ ಅಕ್ವೈರ್ ಮಾಡುವ ಅಧಿಕಾರ ಈಗಿದೆ. ಅಂಥ ಸಂದರ್ಭಗಳಲ್ಲಿ ಸರಕಾರ ಇಂಥ ಏಜೆನ್ಸಿಯನ್ನು ಉಪಯೋಗಿಸಬೇಕಾದ ಅವಶ್ಯಕತೆಯಿಲ್ಲ. ಇಲ್ಲಿ ಛೇರ್ಮನ್ ಸರಕಾರದಿಂದ ನಾಮಕರಣ ಮಾಡಿ ಮುನಿಸಿಪಲ್ ಕಮಿಷನರು, ಚೀಫ್ ಎಗ್ಸಿಕ್ಯುಟಿವ್ ಆಫೀಸರು ಮುಂತಾದವರನ್ನು ಹಾಕಿರುವುದನ್ನು ನೋಡಿದರೆ ಸರಕಾರ ಈ ಅಧಿಕಾರವನ್ನು ತನ್ನ ಕೈಲಿಟ್ಟುಕೊಳ್ಳಬೇಕು ಎಂಬ ಉದ್ದೇಶವನ್ನಿಟ್ಟುಕೊಂಡಿರುವಂತೆ ಕಾಣುತ್ತದೆ. ಅಧಿಕಾರ ವಿಕೇಂದ್ರೀಕರಣ ಮಾಡಬೇಕು, ಸ್ಥಳಿಯ ಸರಕಾರಕ್ಕೆ ಪ್ರೋತ್ಸಾಹ ಕೊಡಬೇಕು, ಪ್ರಜಾಪ್ರಭುತ್ವವನ್ನು ಸ್ಥಳೀಯ ಮಟ್ಟಕ್ಕೆ ಇಳಿಸಬೇಕು ಎಂದು ಹೇಳುವಾಗ ಕೇಂದ್ರೀಕರಣದ ಆವಶ್ಯಕತೆಯಾದರೂ ಏನು ? ಈಗ ನಾನು ಹಾಸನದ ಪೌರ ಸಭೆ ಅಧ್ಯಕ್ಷನಾಗಿದ್ದೇನೆ. ನಮ್ಮ ನಗರದ ಹತ್ತಿರವಿದ್ದ ಅನೇಕ ಜಮೀನುಗಳನ್ನು ಅಕ್ವೈರ್ ಮಾಡಿದ್ದೇವೆ. ಕೈಗಾರಿಕೆ ಜಾಸ್ತಿಯಾಗಿರುವಾಗ, ನಗರದ ಬಡಾವಣೆಯಾಗಬೇಕಾದಾಗ ಇಂಥ ವಿಶೇಷ ವ್ಯವಸ್ಥೆ ಆಗಬೇಕಾಗಿದೆ. ಸಾಧಾರಣವಾಗಿ ಇಡೀ ದೇಶದಲ್ಲಿ ಎಲ್ಲಾ ನಗರಗಳ ಬಡಾವಣೆಗೂ ವಿಶೇಷ ಸಿಬ್ಬಂದಿಯನ್ನು ನೇಮಿಸುವುದರಿಂದ ಆರ್ಥಿಕ ದೃಷ್ಟಿಯಿಂದ ಹೊರೆ ಹೆಚ್ಚಾಗುತ್ತದೆ. ರಸ್ತೆ, ಕನ್ಸರ್ವೆನ್ಸಿ ಮತ್ತಿತರ ವ್ಯವಸ್ಥೆ ಮಾಡಿದಮೇಲೆ ಸ್ಥಳಿಯ ಸಂಸ್ಥೆಗಳಿಗೆ ಪಾತ್ರೆ ವಹಿಸಬೇಕೆಂದು ಬಿಲ್ಲಿನಲ್ಲಿ ನಮೂದಾಗಿದೆ. ಟ್ರಸ್ಟ್‌ಬೋರ್ಡ್ ನಿರ್ಮಿಸಿರುವ ಬಡಾವಣೆಯಲ್ಲಿ ನೀರಿನ ಸರಬರಾಯಿ ವಿಚಾರದಲ್ಲಿ ಅವ್ಯವಸ್ಥೆ ಇದೆ ಎಂದು ಶ್ಯಾಮಣ್ಣನವರು ಹೇಳಿದರು. ಈ ಅವ್ಯವಸ್ಥೆ ಈಗ ಉದ್ದೇಶಿಸಲ್ಪಟ್ಟಿರುವ ಬೋರ್ಡನ್ನು ಮಾಡಿದಮೇಲೆ ಇನ್ನೂ ಬೆಳೆಯುತ್ತದೆ. ಪೌರಸಭೆಯವರು ಈಗೇನೋ ನೀರಿನ ವ್ಯವಸ್ಥೆ ಮಾಡಿಕೊಂಡಿರುತ್ತಾರೆ. ಬಡಾವಣೆ ಮಾಡಿದಮೇಲೆ ನೀರನ್ನು ಅಲ್ಲಿಗೆ ಒದಗಿಸುವುದಕ್ಕೆ ತಡಮಾಡಿದರೆ ಅಲ್ಲಿ ಜನರು ವಾಸಮಾಡುವುದಕ್ಕೆ ಮತ್ತು ಕಟ್ಟಡಗಳನ್ನು ಕಟ್ಟುವುದಕ್ಕೆ ಕಷ್ಟವಾಗು

ತ್ತದೆ. ಇದರ ಬದಲು ಟೌನ್ ಪ್ಲಾನಿಂಗ್ ಆಕ್ಟಿನ ಪ್ರಕಾರ ಸಮಗ್ರವಾಗಿ ಪ್ರತಿ ನಗರಕ್ಕೆ 5 ಅಥವಾ 10 ಮೈಲಿಗಳೊಳಗೆ ವ್ಯವಸ್ಥಿತವಾದ ಒಂದು ಡೆವಲಪ್‌ಮೆಂಟ್ ಯೋಜನೆಯನ್ನು ಸರಕಾರ ಮಾಡಬೇಕು. ಹೀಗೆ ಮಾಡಿ ಪೌರಸಭೆಯ ವಿಸ್ತೀರ್ಣವನ್ನು ವಿಸ್ತಾರಮಾಡಬೇಕು ಎಂದು ಕಡ್ಡಾಯ ಮಾಡಬಹುದು ಈಗಿರುವ ಪೌರಸಭೆಯ ಕಾನೂನಿನ ಪ್ರಕಾರ ಟೌನುಗಳಲ್ಲಿ ಬಡಾವಣೆಯನ್ನು ನಿರ್ಮಿಸಲು ಅಧಿಕಾರವಿದೆ. ಸ್ಥಳಾವಕಾಶವಿರುವುದನ್ನು ಸರಕಾರ ಅಕ್ವೈರ್ ಮಾಡಬೇಕು ಎಂದು ಕೇಳಲು ಅವಕಾಶವಿದೆ. ನಾಳೆ ಬೋರ್ಡಿಗೆ ಅಧಿಕಾರ ಬಂದರೆ ಪೌರಸಭೆ ವಿಸ್ತರಣ ಮಾಡಬೇಕು, ಅಕ್ವೈರ್ ಮಾಡಬೇಕು ಎಂದು ಹೇಳಿದಾಗ ಸರಕಾರ ಪೇಚಿಗೆ ಸಿಕ್ಕಬೇಕಾಗುತ್ತದೆ. ಪ್ರತಿ ನಗರಗಳಿಗೂ 25 ವರ್ಷಕ್ಕೆ ಎಷ್ಟು ಬಡಾವಣೆಗೆ ಜಾಗ ಬೇಕಾಗಬಹುದು ಎಂದು ಟೌನ್ ಪ್ಲಾನಿಂಗ್ ಸೆಕ್ಷನ್ ನೋಡಿ ಬ್ಲೂ ಪ್ರಿಂಟ್ ತಯಾರಿಸಿ ಕೊಟ್ಟರೆ ಅದರಂತೆ ಪೌರಸಭೆ ಮಾಡಬೇಕು. ಸೈಟುಗಳನ್ನು ವಿಂಗಡಿಸಿದ್ದೇವೆ, ರಸ್ತೆ ಮಾಡಬೇಕು, ಕನ್‌ಸರ್ವೆನ್ಸಿ ಮಾಡಬೇಕು, ಶಾಲೆ, ಆಸ್ಪತ್ರೆ, ಪಾರ್ಕ್ ಮುಂತಾದವುಗಳನ್ನು ಮಾಡಿಕೊಡಬೇಕು ಎಂದು ಕಡ್ಡಾಯಮಾಡಲು ಪೌರಸಭೆ ಶಾಸನವನ್ನು ಬದಲಾಯಿಸಲು ಅವಕಾಶವಿದೆ. ಇದರ ಜೊತೆಗೆ ಮುನಿಸಿಪಾಲಿಟಿಯಲ್ಲಿ 19 ಸಾವಿರ ರೂಪಾಯಿಗಳೊಳಗಿರುವ ಕೆಲಸವನ್ನು ಛೇರ್ಮನ್ ಮಾಡಬಹುದು, 10 ರಿಂದ 25 ಸಾವಿರವೊಳಗಿರುವ ಕೆಲಸವನ್ನು ಬೋರ್ಡು ಮಾಡುವುದಾದರೆ ಅದಕ್ಕೆ ಮೇಲ್ಪಟ್ಟು ಕೆಲಸ ಮಾಡಲು ಸರಕಾರದ ಅನುಮತಿ ಪಡೆಯಬೇಕು. ಸಾಧಾರಣವಾಗಿ 25 ಸಾವಿರ ರೂಪಾಯಿಗಳ ಕೆಲಸ ಮಾಡಬೇಕಾದರೆ ಎರಡು ಸಾರಿ ಅಂದಾಜು ಮಾಡಿ ಕೆಲಸ ಮಾಡುವುದಕ್ಕೆ ಸಾಧ್ಯವಿದೆ.

ಬಡಜನತೆಗೆ ನಿವೇಶನಗಳನ್ನು ಒದಗಿಸಿಕೊಟ್ಟು, ಕಟ್ಟಡ ಕಟ್ಟುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಡಬೇಕು ಎಂಬ ಬ್ಲೂಪ್ರಿಂಟ್ ಎನಿದೆ ಅದರ ಪ್ರಕಾರ ಲಾಭವೂ ಇಲ್ಲ, ನಷ್ಟವೂ ಇಲ್ಲ ಎನ್ನುವ ಆಧಾರದ ಮೇಲೆ ಸೈಟುಗಳ ವಿಲೇವಾರಿ ಮಾಡಬೇಕಾಗಿದೆ. ಆರೀತಿ ಮಾಡಲು ಪೌರಸಭೆಗಳಿಗೆ ಹಣ ಕೊಟ್ಟು ನಗರಗಳು ವಿಸ್ತಾರವಾಗುವುದಕ್ಕೆ ಬೇಕಾದ ಸ್ಥಳಗಳನ್ನು ಕೊಳ್ಳುವುದಕ್ಕೆ ಮತ್ತು ಅದನ್ನು ಲೇ ಔಟ್ ಮಾಡುವುದಕ್ಕೆ ಪೌರಸಭೆಯವರು ಏನು ಖರ್ಚು ಮಾಡುತ್ತಾರೆ ಅದೆಲ್ಲವನ್ನೂ ನೋಡಿಕೊಂಡು ಅಲ್ಲಿ ವಿಂಗಡಿಸಿರುವ ಸೈಟುಗಳ ಬೆಲೆ ಏನಾಗುತ್ತದೆ ಎಂಬುದನ್ನು ನೋಡಿಕೊಂಡು ಅದರ ಪ್ರಕಾರ ಸೈಟುಗಳ ವಿಲೇವಾರಿ ಮಾಡುವುದಕ್ಕೆ ಮತ್ತು ಕಾರ್ನರ್ ಸೈಟ್ಸ್ ಮತ್ತು ಕೆಲವು ದೊಡ್ಡ ಸೈಟುಗಳನ್ನು ಬಹಿರಂಗ ಹರಾಜು ಮುಖಾಂತರ ಮಾರಾಟ ಮಾಡುವುದಕ್ಕೆ ವ್ಯವಸ್ಥೆಯನ್ನು ಮಾಡಿದರೆ ಪೌರಸಭೆಯವರು ಆ ಕೆಲಸವನ್ನು ಮಾಡಬಹುದು. ಪೌರಸಭೆಯವರು ಮಾಡದೆ ಇರುವ ಕೆಲಸವಿಲ್ಲ. ಸಾರ್ವಜನಿಕ ಪ್ರತಿನಿಧಿಗಳಾಗಿರುವ ಪೌರಸಭೆಗಳ ಆಡಳಿತ ವರ್ಗದ ಅಧಿಕಾರವನ್ನು ಮೊಟಕುಗೊಳಿಸುವಂಥ ಮಸೂದೆ ಇದು. ಸರ್ಕಾರ ಪೌರಸಭೆಗಳ ಮುಖಾಂತರ ಕೆಲಸ ಮಾಡಿಸುವುದಕ್ಕೆ ಯಾವ ರೀತಿಯಲ್ಲಿಯೂ ಕಷ್ಟ ಬರಲಾರದು ಎನ್ನುವುದರಲ್ಲಿ ಸಂಶಯವಿಲ್ಲ. ಮಾನ್ಯ ಸದಸ್ಯರಾದ ಶ್ರೀಕಂಠಯ್ಯನವರು ಹೇಳಿದ ಹಾಗೆ ವ್ಯವಸ್ಥಿತವಾಗಿ, ವೈಜ್ಞಾನಿಕ ರೀತಿಯಲ್ಲಿ ನಮ್ಮ ನಗರಗಳ ಬಡಾವಣೆ ಮಾಡಬೇಕಾದರೆ ಸಮಗ್ರವಾದ ಒಂದು ಯೋಜನೆಯನ್ನು ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಮಾಡಬೇಕು. ಅದಕ್ಕೆ ಬದಲಾಗಿ ಅರ್ಬನ್ ಡೆವಲಪ್‌ಮೆಂಟ್ ಬೋರ್ಡುಗಳನ್ನು ಮಾಡುತ್ತೇವೆಂದರೆ ತಪ್ಪಾಗುತ್ತದೆ. ಆ ದೃಷ್ಟಿಯಿಂದ ಈ ಮಸೂದೆಯನ್ನು ನಾನು ವಿರೋಧಿಸುತ್ತೇನೆ.

ಅರ್ಬನ್ ಏರಿಯಾ ಎಂಬುದಕ್ಕೆ ಕೊಟ್ಟಿರುವ ಅರ್ಥ ವಿವರಣೆಯನ್ನು ನೋಡಿದರೆ ಪೌರಸಭೆಗಳ ವ್ಯಾಪ್ತಿಯೊಳಗೆ ಕೂಡ ಈ ಬೋರ್ಡ್ ಕೆಲಸ ಮಾಡುವುದಕ್ಕೆ ಅವಕಾಶವಿದೆ. ಇದರಿಂದ ಡೂಪ್ಲಿಕೇಷನ್ ಆಫ್ ವರ್ಕ್ ಆಗುತ್ತದೆ. ಬೋರ್ಡ್ ತನ್ನ ಅಧಿಕಾರವನ್ನು ಪೌರಸಭೆಯ ವ್ಯಾಪ್ತಿಯೊಳಗೆ ಕೂಡ ಚಲಾಯಿಸುವುದಕ್ಕೆ ಅವಕಾಶವಾಗುತ್ತದೆ. ಇದರಿಂದ ಒಂದಕ್ಕೊಂದು ಕ್ಲ್ಯಾಷ್ ಆಗುವುದಕ್ಕೆ ಅವಕಾಶವಿದೆ. ಪೌರಸಭೆಗಳ ಮತ್ತು ನಗರಗಳ ಸುತ್ತಮುತ್ತ ಇರುವಂಥ ಜಾಗ ಪಂಚಾಯಿತಿಗೆ ಸೇರಿದಂಥದ್ದು, ಪಂಚಾಯಿತಿಗಳು ಬಹು ಮುಖ್ಯವಾದ ಸ್ಥಳೀಯ ಸಂಸ್ಥೆಗಳ ಅಂಗಗಳು ಎನ್ನುವುದನ್ನು ಮರೆಯಬಾರದು. ಪಂಚಾಯಿತಿಗಳ ಜೂರಿಸಡಿಕ್ಷನ್‌ನಲ್ಲಿ ಯಾರಾದರೂ ಕಟ್ಟಡಗಳನ್ನು ಕಟ್ಟಬೇಕಾದರೆ ಪಂಚಾಯಿತಿಯಿಂದ ಅದಕ್ಕೆ ಲೈಸೆನ್ಸ್ ಪಡೆಯಬೇಕು. ಪೌರಸಭೆಗಳ ವ್ಯಾಪ್ತಿಯನ್ನು ಬಿಟ್ಟು ಹೊರಗೆ ಬರುವ ಪಂಚಾಯಿತಿ ಜಾಗದಲ್ಲಿ ಕಟ್ಟಡ ಕಟ್ಟಬೇಕಾದರೆ ಆಗ ಪಂಚಾಯಿತಿಗೆ ಇರುವ ಅಧಿಕಾರವನ್ನು ಏನು ಮಾಡುತ್ತೀರಿ ಎಂದು ಕೇಳುತ್ತೇನೆ. ಪಂಚಾಯಿತಿಗಳ ಅಧಿಕಾರವನ್ನು ಮೊಟಕು ಮಾಡುವಂಥದ್ದು, ಮುನಿಸಿಪಾಲಿಟಿಗಳ ಅಧಿಕಾರವನ್ನು ಮೊಟಕು ಮಾಡುವಂಥದ್ದು ಸರಿಯಲ್ಲ. ನಗರಾಭಿವೃದ್ಧಿ ಮಂಡಳಿಯವರು ಜಮೀನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು, ರಸ್ತೆಗಳನ್ನು ಮಾಡಿ ಸೈಟುಗಳನ್ನು ವಿಂಗಡಿಸಿದ ಮೇಲೆ ಕನ್‌ಸರ್ವೆನ್ಸಿ ಮಾಡಬೇಕಾದರೆ ಅದನ್ನೂ ಮಾಡಿದ ಮೇಲೆ ಪೌರಸಭೆಗಳಿಗೇ ಆ ಪ್ರದೇಶವನ್ನು ವಹಿಸಿಕೊಡುತ್ತಿದ್ದೀರಿ. ಇಂಥ ಸಂದರ್ಭದಲ್ಲಿ ಯಾವ ದೃಷ್ಟಿಯಿಂದಲೂ ಕೂಡ

(ಶ್ರೀ ಎಚ್. ಬಿ. ಜ್ವಾಲನಯ್ಯ)

ಈ ಮಸೂದೆಯನ್ನು ನಾವು ಅಂಗೀಕಾರ ಮಾಡುವುದು ಸರಿಯಲ್ಲ. ಪಂಚಾಯಿತಿಗಳನ್ನು ಮೇಲ್ಮಟ್ಟಕ್ಕೆ ತರಬೇಕು ಎಂದು ಹೇಳುತ್ತಲೇ ಇದ್ದಾರೆ. ಮಾನ್ಯ ಮಂತ್ರಿಗಳು ಮೈಸೂರು ಪೌರಸಭೆಯ ಅಧ್ಯಕ್ಷರಾಗಿದ್ದು, ಸ್ಥಳೀಯ ಸಂಸ್ಥೆಗಳ ವಿಚಾರವನ್ನು ಚೆನ್ನಾಗಿ ತಿಳಿದುಕೊಂಡವರಾಗಿರುತ್ತಾರೆ. ಹಾಗಿದ್ದೂ ಕೂಡ ಅವರು ಇಂಥ ಮಸೂದೆಯನ್ನು ತಂದಿರುವುದು ಆಶ್ಚರ್ಯವೆನಿಸುತ್ತದೆ. ಈ ಮಸೂದೆಯನ್ನು ನಮ್ಮ ಮುಂದೆ ಏನು ಮಂಡಿಸಿದ್ದಾರೆ ಅವರಲ್ಲಿ ಎಲ್ಲ ರೀತಿಯಿಂದಲೂ ಕೂಡ ಸ್ಥಳೀಯ ಸಂಸ್ಥೆಗಳ ಹಕ್ಕನ್ನು ಮೊಟಕು ಮಾಡುವಂಥ ಎಲ್ಲ ವಿಧಿಗಳೂ ಇವೆ. ಈ ವಿಧಿಗಳನ್ನು ಒಪ್ಪಿದ್ದೇ ಆದರೆ ಸ್ಥಳೀಯ ಸಂಸ್ಥೆಗಳನ್ನು ಮತ್ತು ಪ್ರಜಾಪ್ರಭುತ್ವವನ್ನು ಕೆಳಮಟ್ಟದಿಂದ ಬೆಳೆಸಬೇಕೆಂದು ಏನು ಯೋಚನೆ ಮಾಡುತ್ತಿದ್ದೇವೆ ಅದಕ್ಕೆ ವಿರೋಧವಾದ ಕ್ರಮವನ್ನು ಅನುಸರಿಸಿದ ಹಾಗೆ ಆಗುತ್ತದೆ ಎಂದು ಹೇಳಿ, ಇದನ್ನು ಜಾಯಿಂಟ್ ಸೆಲೆಕ್ಟ್ ಸಮಿತಿಗೆ ಕಳಿಸುತ್ತಿರುವುದರಿಂದ ಅವರು ಎಲ್ಲ ರೀತಿಯಿಂದಲೂ ಈ ಮಸೂದೆಯನ್ನು ಪರಿಶೀಲಿಸುತ್ತಾರೆಂದು ನನಗೆ ಸಂಪೂರ್ಣವಾದ ಬರವಸೆ ಇದೆ. ಅವರು ಯಾವರೀತಿಯಿಂದಲೂ ಸ್ಥಳೀಯ ಸಂಸ್ಥೆಗಳ ಹಕ್ಕನ್ನು ಮೊಟಕು ಮಾಡಬಾರದೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಅಧ್ಯಕ್ಷರೇ, ಈ ಮಸೂದೆಗೆ ಸಭೆಯು ಕೊಟ್ಟಿರತಕ್ಕ ಬೆಂಬಲಕ್ಕಾಗಿ ನಾನು ಕೃತಜ್ಞನಾಗಿದ್ದೇನೆ. ಅನೇಕ ಮಾನ್ಯ ಸದಸ್ಯರು ಈ ಮಸೂದೆಯ ಮೇಲೆ ಮಾತನಾಡುತ್ತ ಬಹಳ ಉಪಯುಕ್ತವಾದ ಅಂಶಗಳನ್ನು ಹೇಳಿದ್ದಾರೆ. ಆ ಅಂಶಗಳನ್ನೆಲ್ಲ ಜಾಯಿಂಟ್ ಸೆಲೆಕ್ಟ್ ಸಮಿತಿಯ ಸದಸ್ಯರು ಪರಿಶೀಲನೆ ಮಾಡಿ ತಮ್ಮ ಸಿಫಾರಸುಗಳನ್ನು ಈ ಸಭಗೆ ಒಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ.

ಈ ಮಸೂದೆಯ ಮೇಲೆ ಮಾತನಾಡತಕ್ಕ ಸಮಯದಲ್ಲಿ ಕೆಲವು ವಿಚಾರಗಳಲ್ಲ ಬಹುಶಃ ಈ ಮಸೂದೆಯನ್ನು ಮಂಡಿಸುವ ವೇಳೆಯಲ್ಲಿ ನಾನು ವಿವರವಾಗಿ ತಿಳಿಸಿದ್ದರೆ ಈ ತರಹ ಟೀಕೆಗಳು ಬರುತ್ತಿರಲಿಲ್ಲವೆಂದು ನನಗನ್ನಿಸುತ್ತದೆ. ಜಾಯಿಂಟ್ ಸೆಲೆಕ್ಟ್ ಕಮಿಟಿ ರಿಪೋರ್ಟ ಈಗಾಗಲೇ ಬಂದಿದ್ದು ಅದನ್ನು ಸಭೆಯ ಮುಂದೆ ಇಟ್ಟಿದ್ದರಿಂದ ಈ ಸಭೆಯವರು ಆದರಮೇಲೆ ಹೆಚ್ಚು ಟೀಕೆ ಮಾಡಲಾರರು ಎಂದು ನಾನು ಭಾವನೆ ಮಾಡಿದೆ. ಈ ಟೀಕೆಗಳನ್ನೆಲ್ಲ ಕೇಳಿದಮೇಲೆ ನನಗೆ ಒಂದು ಅಂಶ ಸ್ಪಷ್ಟವಾಗುತ್ತದೆ. ಎಷ್ಟೇ ಗಮನಕೊಟ್ಟು ಮಸೂದೆಯನ್ನು ತಯಾರು ಮಾಡಿದರೂ ಅದರಮೇಲೆ ಇನ್ನೂ ಅಷ್ಟು ಹೇಳುವುದಕ್ಕೆ ಅವಕಾಶವಿರುತ್ತದೆ ಒಂದು ಸಿದ್ಧಾಂತವಾಯಿತು; ನಾವು ಯಾವುದನ್ನೂ ಕೂಡ ತಪ್ಪುಗಳಿಲ್ಲದೆ ಪರಿಪೂರ್ಣವಾಗಿ ಮಾಡುವುದಕ್ಕೆ ಸಾಧ್ಯವಿಲ್ಲ. ಈಗ ಮಾಡಿದಂಥ ಟೀಕೆಗಳು ಮಹತ್ವವಿದ್ದಲ್ಲ ಎಂದು ನಾನು ಹೇಳುತ್ತಿಲ್ಲ. ಕೆಲವು ಬಹಳ ಘನವಾಗಿ ಪರಿಶೀಲನೆ ಮಾಡತಕ್ಕವು ಇವೆ. ಕೆಲವು ಮಾನ್ಯ ಸದಸ್ಯರು ನಾವು ಹೊಸ ಹಾದಿಯನ್ನು ಹಿಡಿಯುತ್ತಿದ್ದೇವೆಂದು ತಿಳಿದುಕೊಂಡಿದ್ದಾರೆ. ನಮ್ಮ ಹಿರಿಯರು ತುಳಿದಿರತಕ್ಕ ದಾರಿಯಲ್ಲಿ ಹೋಗುತ್ತಿದ್ದೇವೆ. ಈ ಕಾನೂನಿನ ಅಂಶ ಮತ್ತೆ ರಾಜ್ಯಾಂಗ ಶಾಸನದಲ್ಲಿ ಅಡಕವಾಗಿರತಕ್ಕ ಅಂಶ. 20 ವರ್ಷಗಳ ಅವಧಿಯಲ್ಲಿ ಎಷ್ಟೋ ಚರ್ಚೆಯಾಗಿದೆ. ರಾಜ್ಯಾಂಗ ಶಾಸನವಾದಮೇಲೆ ಹಳೇ ಶಾಸನದ ರೀತ್ಯ ಅನೇಕ ಕಾನೂನುಗಳಾಗಿವೆ. ಇದೇ ಕಾನೂನು ಹೈಕೋರ್ಟ್ ಮುಂದೆ ಹೋಗಿ ತೀರ್ಮಾನವಾಗಿದೆ. ಕೆಲವು ಸುಪ್ರೀಂ ಕೋರ್ಟಿಗೂ ಹೋಗಿವೆ. ಟ್ರಸ್ಟ್ ಬೋರ್ಡ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಸುಪ್ರೀಂ ಕೋರ್ಟಿಗೂ ಹೋಗಿವೆ.

ಮಾನ್ಯ ನಾಗಪ್ಪನವರಲ್ಲಿ ನಾನು ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಇಂಥ ಕಾನೂನು ಮಾಡುವುದಕ್ಕೆ ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಅದು ಬರುವುದಿಲ್ಲ ಎಂದು ಮೊದಲನೆಯ ಆಕ್ಷೇಪಣೆಯನ್ನು ತೆಗೆದರು. ಆ ವಾದದಲ್ಲಿ ಅಂಥ ಹುರುಳಿಲ್ಲ. ಕಾರಣವೇನೆಂದರೆ ಇವುಗಳ ಬಗ್ಗೆ ಆಗಲೇ ಹೈಕೋರ್ಟಿನಲ್ಲಿ ಮತ್ತು ಸುಪ್ರೀಂ ಕೋರ್ಟಿನಲ್ಲಿ ತೀರ್ಮಾನವಾಗಿದೆ. ಬೆಂಗಳೂರು ಟ್ರಸ್ಟ್ ಬೋರ್ಡ್ ಆಕ್ಟ್‌ನಲ್ಲಿ ಇರುವ ಕಲಮುಗಳೇ ಇಲ್ಲಿ ಹೆಚ್ಚಾಗಿರುವುದು. ಕೆಲವು ವರ್ಷಗಳ ಹಿಂದೆ ನಮ್ಮ ಹೈಕೋರ್ಟಿನಲ್ಲಿ ಒಂದು ಮೊಕದ್ದಮೆ ಆಗಿ ಈ ರೀತಿ ಅಕ್ವೈರ್ ಮಾಡಿಕೊಳ್ಳುವುದು ಸರಿಯೇ ರಾಜ್ಯ ಸರ್ಕಾರಕ್ಕೆ ಈ ಅಧಿಕಾರವಿದೆಯೇ ಅಥವಾ ಈಗ ಟ್ರಸ್ಟ್ ಬೋರ್ಡಿಗೆ ಅಕ್ವೈರ್ ಮಾಡಿಕೊಳ್ಳುವುದಕ್ಕೆ ಅಧಿಕಾರವಿದೆಯೇ ಎನ್ನುವುದು ಕೂಡ ಪ್ರಶ್ನೆ ಮಾಡಲ್ಪಟ್ಟಿತು. ಅದರಲ್ಲಿಯೂ ಕೂಡ ತೀರ್ಮಾನವಾಗಿದೆ. ಮತ್ತೆ ಅಲ್ಲಿಂದೀಚೆಗೆ ಇದೇ ವಿಚಾರಗಳು ಸುಪ್ರೀಂ ಕೋರ್ಟ್ ಮುಂದೆ ಹೋಗಿ, ನಮ್ಮ ರಾಜ್ಯದ್ದು ಮಾತ್ರವಲ್ಲ, ಬೇರೆ ರಾಜ್ಯಗಳಲ್ಲಿರುವ ಟ್ರಸ್ಟ್ ಬೋರ್ಡ್‌ಗಳ ವ್ಯವ

ಹಾರಗಳ ಬಗ್ಗೆಯೂ ಸುಪ್ರೀಂ ಕೋರ್ಟ್ ಮುಂದೆ ಹೋಗಿ ತೀರ್ಮಾನವಾಗಿದೆ. ಆದುದರಿಂದ ನಾನು ಈ ಸಭೆಗೆ ಒಂದು ವಿಚಾರವನ್ನು ಸ್ಪಷ್ಟಪಡಿಸುವುದಕ್ಕೆ ತಮ್ಮ ಅನುಮತಿಯನ್ನು ಬೇಡು ತ್ತಿದ್ದೇನೆ.

5-30 P.M.

ಇದಕ್ಕೆ ರಾಜ್ಯಾಂಗಶಾಸನದ ರೀತ್ಯಾ ಯಾವ ವಿಧವಾದ ಬಾಧಕವೂ ಇಲ್ಲ ಎಂದು ಸ್ಪಷ್ಟವಾದ ಮೇಲೆ, ಈ ಅಧಿಕಾರವನ್ನು ಪೌರಸಭೆಗಳಿಗೇ ಏತಕ್ಕೆ ಕೊಡಬಾರದು ಎಂದು ಕೆಲವರು ಟೀಕೆ ಮಾಡಿದರು. ಆದರೆ ಉತ್ತರ ಕೊಡುವ ವೇಳೆಯಲ್ಲಿ ಅವರು ಇದ್ದಿದ್ದರೆ ಬಹಳ ಸಂತೋಷ ವಾಗುತ್ತಿತ್ತು. ಶ್ರೀಮಾನ್ ಜ್ವಾಲನಯ್ಯನವರು ಹೇಳಿದರು. ಪುಟ್ಟಸ್ವಾಮಿಯವರು ಪುರಸಭೆಯ ಅಧ್ಯಕ್ಷರಾಗಿದ್ದರು, ಅವರು ಸ್ಥಳೀಯ ಸಂಸ್ಥೆಗಳ ಛಾಂಪಿಯನ್‌ಗೆ ಹೋರಾಡುವುದನ್ನು ಬಿಟ್ಟು ಇದಕ್ಕೆ ವ್ಯತಿರಿಕ್ತಾಭಿಪ್ರಾಯರಾಗಿದ್ದಾರೆ ಎಂದು. ಅವರು ಈಗ ಹಾಜರಿದ್ದಿದ್ದರೆ ನನ್ನ ಉತ್ತರವನ್ನು ಕೇಳಿದ ಮೇಲಾದರೂ ತಮ್ಮ ಅಭಿಪ್ರಾಯವನ್ನು ಬದಲಾವಣೆ ಮಾಡಿಕೊಳ್ಳುತ್ತಿದ್ದರು. 1964ರಲ್ಲಿ ಈ ಸಭೆ ಒಪ್ಪಿ ಜಾರಿಗೆ ಬಂದಂಥ ಪುರಸಭೆ ಕಾನೂನಿನಲ್ಲಿ ಎಲ್ಲಾ ಅಂಶಗಳೂ ಇವೆ.

Sri D. B. KALMANKAR.—There is Chapter VIII wherein there is provision for improvement schemes and improvement boards from sections 155 to 174. Even under sections 3 and 4 there is provision for expansion of cities and for development activities. The Municipalities Act itself is sufficient and there are sufficient provisions under it. Therefore, where is the need to take away those powers of the Municipalities and have a separate Act for this purpose?

ಶ್ರೀ ಕೆ. ಪುಟ್ಟಸ್ವಾಮಿ.—ಪುರಸಭಾ ಕಾನೂನಿನಲ್ಲೂ ಅಭಿವೃದ್ಧಿ ಸಮಿತಿಗಳನ್ನು ಮಾಡುವು ದಕ್ಕೆ ಅವಕಾಶ ಇದೆ ಎಂದು ನಾನು ಮಾನ್ಯ ಸಭೆಯ ಸದಸ್ಯರ ಗಮನಕ್ಕೆ ತರುತ್ತೇನೆ. ಆದರೆ ದೇಶದಲ್ಲಿರತಕ್ಕ ನೂರಾರು ಪುರಸಭೆಗಳ ಪೈಕಿ ಯಾವ ಪುರಸಭೆಯವರು ಈ ಕಾರ್ಯ ಮಾಡಿದ್ದಾರೆ ತಿಳಿಸಿ. ಅನೇಕವೇಳೆ ನಾವು ನಮ್ಮ ಸುತ್ತಮುತ್ತ ಸನ್ನಿವೇಶಗಳ ಒತ್ತಡಕ್ಕೆ ಒಳಗಾಗಿ, ಪುರಸಭಾ ಸದಸ್ಯರು ಕೈಗೊಂಡಂಥ ಯೋಜನೆಗಳು ಮಾರ್ಪಾಡು ಆಗಬಹುದು, ಆ ಕೆಲಸ ಅರ್ಧ ಮುಗಿದು ಅಲ್ಲಿಯೇ ಕೈಬಿಡುವ ಒಂದು ಅಪಾಯ ಇದೆ. ಇಂತಹ ಸಮಯದಲ್ಲಿ ಒಂದು ಅಭಿವೃದ್ಧಿ ಸಮಿತಿ ಇದ್ದರೆ ಒಳ್ಳೆಯದು ಎಂದು ಇಲ್ಲಿ ಅಡಕ ಮಾಡಲಾಗಿದೆ. ನಾವು ಅನೇಕ ಪುರಸಭೆಗಳಿಗೂ ಹೇಳಿ ದ್ದೇವೆ. ಈ ಒಂದು ಕಾರ್ಯವನ್ನು ಜಾರಿಗೆ ತನ್ನಿ ಎಂದು. ಆದರೆ ಯಾರೂ ಜಾರಿಗೆ ತರಲಿಲ್ಲ. ಸ್ಪಷ್ಟವಾಗಿ ಇದನ್ನು ಯೋಚನೆಮಾಡಿದ ಮೇಲೆ ಇಂತಹ ಒಂದು ಕಾನೂನು ತರುವುದು ಒಳ್ಳೆಯದು ಎಂದು ಅನ್ನಿಸಿತು. ಊರಿನ ಪಕ್ಕದಲ್ಲಿರತಕ್ಕಂಥ, ಬೆಲೆಯುಳ್ಳಂಥ ಜಮೀನು ಬೇಕಾಗಿದೆ, ಯಾರಿಗೆ ಮನೆ ಇಲ್ಲವೋ, ಅಂಥವರಿಗೆ ಅದನ್ನು ಕೊಡಬೇಕು ಎಂದರೆ, ಅದನ್ನು ಕಾರ್ಯಗತ ಮಾಡಬೇಕಾ ದರೆ, ಧೈರ್ಯ ಬೇಕು, ಅದು ಬಹಳ ಕಷ್ಟದ ಕೆಲಸ. ಅನೇಕರ ಮನಸ್ಸಿನಲ್ಲಿ ಏನಿದೆ ಎಂದರೆ, ಇದು ಒಂದು ನಿವೇಶನವನ್ನು ಬಡಾವಣೆ ಮಾಡತಕ್ಕಂಥ ಬಾಡಿ. ಆದ್ದರಿಂದ ಇದು ಅರ್ಬನ್ ಡೆವಲೆಪ್‌ಮೆಂಟ್ ಬೋರ್ಡ್ ಅನಿಸಿತು. ಇದು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಮಾಡುವ ಕೆಲಸ ಕ್ಕಿಂತಲೂ ಜಾಸ್ತಿ ಕೆಲಸ ಮಾಡಬೇಕಾಗಿದೆ. ಹೊರಗಿನ ಬಡಾವಣೆ ಮಾಡುವುದು ಒಂದೇ ಅಲ್ಲ, ಬಡಾವಣೆಯನ್ನು ಯಾರು ಬೇಕಾದರೂ ಮಾಡಬಹುದು ಆದರೆ ಊರಿನ ಒಳಗಡೆ ಇರುವ ಕೊಳ್ಚೆ ಪ್ರದೇಶವನ್ನು ನಿರ್ಮೂಲ ಮಾಡುವುದು, ಚಿಕ್ಕ ರಸ್ತೆಗಳನ್ನು ದೊಡ್ಡರಸ್ತೆಗಳನ್ನಾಗಿ ಮಾಡುವುದು ಮುಂತಾದ ಕೆಲಸ ಮಾಡಬೇಕಾಗಿದೆ. ಆದರೆ ಯಾವ ಪುರಸಭೆಗಳೂ ಇದುವರೆಗೂ ಮಾಡದೇ ಇರುವಂಥ ಕೆಲಸಗಳನ್ನು ಈ ಬೋರ್ಡ್ ಮಾಡಬೇಕಾಗಿದೆ.

ಶ್ರೀ ಎಲ್. ಶ್ರೀಕಂಠಯ್ಯ.—ಜನಗಳ ಒತ್ತಡಗಳಿಂದ ಅನೇಕ ಸಂಸ್ಥೆಗಳು ಕೆಲಸಮಾಡುವು ದಕ್ಕಾಗುವುದಿಲ್ಲ. ಅರ್ಬನ್ ಡೆವಲಪ್ ಮುಖಾಂತರ ಸುಂದರವಾದ ಡೆವಲಪ್‌ಮೆಂಟ್ ಮಾಡ ಬಹುದು ಎಂದು ಉದ್ದೇಶಪಟ್ಟು ನೀವು ಕಾಯಿದೆ ತಂದಿದ್ದೀರಿ ಎಂದು ಅನೇಕರಿಗೆ ಗೊತ್ತಿದೆ. ಪ್ರತಿಯೊಂದು ಇದೇರೀತಿ ನಡೆಯುತ್ತದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಮೈಸೂರು ನಗರದಲ್ಲಿ ಕಾಲು ಶತಮಾನಕ್ಕಿಂತಲೂ ಹೆಚ್ಚು ವಾಸ ಮಾಡತಕ್ಕ ಶ್ರೀಮಾನ್ ಎಲ್. ಶ್ರೀಕಂಠಯ್ಯನವರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಸಂತೋಷ, ಒಂದು ಪಟ್ಟಣದಲ್ಲಿ ಒಂದು ರಸ್ತೆ ಮಾಡಬೇಕಾದರೆ ಪೌರಸಭೆಗಳಿಗೆ ಎಷ್ಟು ಕಷ್ಟ ಇದೆ

(ಶ್ರೀ ಕೆ. ಪುಟ್ಟಸ್ವಾಮಿ)

ಎನ್ನುವುದು ನನಗೆ ಸ್ಪಷ್ಟವಾಗಿ ಗೊತ್ತಿದೆ. ಶ್ರೀ ಶ್ರೀಕಂಠಯ್ಯನವರಿಗೂ ಗೊತ್ತು. ಮೈಸೂರು ನಗರದಲ್ಲಿ ಒಂದು ನೇರ ರಸ್ತೆ ಮಾಡಬೇಕಾದರೆ ಎಷ್ಟು ಕಷ್ಟವಾಯಿತು ಎಂದು. ನಾನೇ ಪುರಸಭಾ ಸದಸ್ಯನಾಗಿದ್ದಾಗ ಈ ವಿಚಾರ ಪ್ರಸ್ತಾಪ ಮಾಡುವುದಕ್ಕೆ ಹಿಂಜರಿಯುತ್ತಾ ಇದೆ. ಇವನ್ನೆಲ್ಲಾ ನೋಡಿದಮೇಲೆ ಈ ಸಂಸ್ಥೆ ಮಾಡುವುದು ಅಗತ್ಯ ಎನಿಸಿತು.

ಇನ್ನೊಂದು ಪ್ರಶ್ನೆ ಏನೆಂದರೆ ಹೀಗೆ ಮಾಡಿದರೆ ಅವರ ಅಧಿಕಾರ ಕಸಿದುಕೊಂಡಂತಾಗುತ್ತದೆ ಮತ್ತು ಲೋಕಲ್ ಬಾಡಿ ಏನು ಇದೆ ಅದನ್ನು ತೃಣೀಕರಿಸಿದಂತಾಗುತ್ತದೆ. ಎಂದು ಹೇಳಿದರು. ಆದರೆ ಸೆಕ್ಷನ್ 15 ಮತ್ತು 16 ನೋಡಿದರೆ, ಸ್ಪಷ್ಟವಾಗಿ ಗೊತ್ತಾಗುತ್ತದೆ. ಸೆಕ್ಷನ್ 16 ನೋಡಿದರೆ ಈ ಸ್ಕೀಮ್ ಆಗಬೇಕಾದರೆ ಏನೇನು ಕ್ರಮಗಳನ್ನು ಅನುಸರಿಸಬೇಕು ಎನ್ನುವುದನ್ನು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದನ್ನು ನೋಡಿದರೆ ಪುರಸಭೆಯವರನ್ನು ತೃಣೀಕರಿಸುವುದಿಲ್ಲ ಎನ್ನುವುದು ಗೊತ್ತಾಗುತ್ತದೆ. ಒಂದು ಬಡಾವಣೆ ಮಾಡಬೇಕಾದರೆ, sites for parks, play-grounds, stadium, recreation grounds, school buildings, markets, motor vehicle stands, theatres, police stations, post offices, Co-operative societies, public urinals and latrines, petrol service stations, hospitals, dispensaries, banks, burial and cremation grounds and sites for public purposes ಇವೆಲ್ಲಾ ಇರಬೇಕು. ಒಂದು ಪಟ್ಟಣ ಬಡಾವಣೆ ಮಾಡುವಂಥ ವೇಳೆಯಲ್ಲಿ ನಾಗರೀಕರಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಬೇಕಾಗಿದೆ. ನಗರ ಸರಿಯಾಗಿ ಬೆಳೆಯಬೇಕಾದರೆ ಜನರಿಗೆ ಅವಶ್ಯಕವಾದ ಕೆಲವು ಸ್ಥಳಗಳನ್ನು ಮೀಸಲಾಗಿಡಬೇಕು ಇದನ್ನು ಸಾಮಾನ್ಯರಾದಂಥಹವರು ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಚ್. ಶ್ರೀಕಂಠಯ್ಯ.—ತಾವು ಅರ್ಬನ್ ಡೆವಲಪ್‌ಮೆಂಟ್ ಮುಖಾಂತರ ನಗರವನ್ನು ಬೆಳೆಸಬೇಕು ಎನ್ನುವುದು ಒಪ್ಪಿಕೊಂಡೆ. ಈಗ ಬೆಂಗಳೂರು ನಗರಕ್ಕೆ ಯಾವುದೋ ಫ್ಯಾಕ್ಟರಿ ಏನೋ ಬರುತ್ತದೆ ಎಂದು ಇಟ್ಟುಕೊಳ್ಳೋಣ. ಅದಕ್ಕೆ 10 ಸಾವಿರ ಕೆಲಸಗಾರರು ಇದ್ದಾರೆ ಎಂದು ಇಟ್ಟುಕೊಳ್ಳೋಣ. ಆಗ 10 ಸಾವಿರ ಸಂಸಾರಗಳು ಆಗುತ್ತದೆ. ಯಾವನು ಕಾರ್ಖಾನೆ ಸ್ಥಾಪನೆ ಮಾಡುತ್ತಾನೋ ಅವನು ಕೆಲಸಗಾರರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕು ಎಂದು ಅವನ ಮೇಲೆ ಒತ್ತಡ ಹಾಕಿದರೆ ಆಗ ಲೇಔಟ್ ಮಾಡಬೇಕಾಗುತ್ತದೆ. ಅದಕ್ಕೆ ಏನು ಪ್ರಾವಿಷನ್ ಮಾಡಿದ್ದೀರಿ?

ಶ್ರೀ ಕೆ. ಪುಟ್ಟಸ್ವಾಮಿ.—ನಗರಾಭಿವೃದ್ಧಿ ಸಮಿತಿಯು ಈ ವಿಚಾರಗಳನ್ನೆಲ್ಲಾ ಪರಿಶೀಲನೆ ಮಾಡಿ ತೀರ್ಮಾನ ಮಾಡಬಹುದು. ಈ ಕಾನೂನಿನಲ್ಲಿ ಮಾಡುವುದಕ್ಕಾಗುವುದಿಲ್ಲ. ಕಂಟ್ರಿ ಅಂಡ್ ಡೆವಲಪ್‌ಮೆಂಟ್ ಟೌನ್ ಪ್ಲಾನಿಂಗ್ ಇದು ಇಂಗ್ಲೆಂಡ್‌ನಲ್ಲೂ ಇದೆ. ಇದನ್ನು ಅಧ್ಯಯನ ಮಾಡಿ ಇದರ ಬಗ್ಗೆ ಕಾರ್ಯಕ್ರಮ ಕೈಗೊಳ್ಳಬೇಕು ಎನ್ನುವ ವಿಚಾರ ಇದೆ. ಅವರು ಮಾತನಾಡುವ ಕಾಲದಲ್ಲಿ ಸ್ಪಷ್ಟವಾಗಿ ಒಪ್ಪಿಕೊಂಡರೇನೆಂದರೆ ಅವರು ಮೈಸೂರು ದೇಶದಲ್ಲಿರಕ್ಕಂತಹ ಟೌನ್ ಮತ್ತು ಕಂಟ್ರಿ ಪ್ಲಾನಿಂಗ್ ಆಕ್ಟನ್ನು ಓದಿಲ್ಲವೆಂದು. ನಾನಾದರೂ ಹೇಳುತ್ತೇನೆ, ತಾವು ಆಕ್ಟ್ ಓದಿದರೆ, ಅದರಿಂದ ನಿಮಗೆ ಸ್ಪಷ್ಟವಾಗುತ್ತದೆ. ಈ ವಿಚಾರ ಸರ್ಕಾರದ ಗಮನದಲ್ಲಿದೆ. 1961ರಲ್ಲಿ ಕಾನೂನು ಮಾಡಿದ್ದಾರೆ. ಕಾನೂನಿನ ಎಲ್ಲಾ ಕಲಮುಗಳನ್ನು ಅನ್ವಯಕ್ಕೆ ತರುವುದಕ್ಕಾಗಲಿಲ್ಲ, ಕಷ್ಟ ಇದೆ. ಈಗ ಪ್ರಯತ್ನ ಮಾಡುತ್ತಿದ್ದೇವೆ. ಯಾರೂ ಯಾವುದನ್ನಾದರೂ ತಯಾರುಮಾಡಿದರೂ :

> "It must be in confirmity with the outlay and development Plan or the comprehensive development Planning of the Planning authority".

ಆದ್ದರಿಂದ ಅವರು ಏನು ಒಂದು ಸಮಗ್ರವಾದ ಯೋಜನೆಯನ್ನು ತಯಾರು ಮಾಡಿರುತ್ತಾರೆ, ಅದನ್ನು ಗಮನದಲ್ಲಿಟ್ಟುಕೊಂಡು ಅದರಂತೆ ನಡೆಯಬೇಕು ಎಂದು ಇಲ್ಲಿ ಸ್ಪಷ್ಟವಾಗುತ್ತದೆ ಒಬ್ಬ ಮಾನ್ಯ ಸದಸ್ಯರು ಹೇಳಿದರು, ಪ್ಲಾನಿಂಗ್ ಅಥಾರಿಟಿ ಎಂದರೆ ಇವರು ಒಬ್ಬ ಅಧಿಕಾರಿಗಳು ಪ್ಲಾನಿಂಗ್ ಅಥಾರಿಟಿ ಏನು ಒಂದು ಯೋಜನೆ ಮಾಡಿದ್ದಾರೆ, ಅದರಂತೆ ಎಲ್ಲಾ ಅಧಿಕಾರವನ್ನೂ, ಕೂಡ ಒಬ್ಬ ಅಧಿಕಾರಿಯ ಕೈಗೆ ಕೊಟ್ಟಹಾಗೆ ಆಯ್ತು. ಕಂಟ್ರಿ ಮತ್ತು ಟೌನ್ ಪ್ಲಾನಿಂಗ್ ಆಕ್ಟನ್ನು ಓದಿದಲ್ಲಿ ಅವರು ಈ ರೀತಿ ಹೇಳುತ್ತಾ ಇರಲಿಲ್ಲವೆಂದೆನಿಸುತ್ತದೆ. ಅಲ್ಲಿ ಸ್ಥಳೀಯ ಸಂಸ್ಥೆ ಪ್ಲಾನಿಂಗ್ ಅಥಾರಟಿ. ಜನರ ಆಕ್ಷೇಪಣೆ ಏನು ಎಂದು ಕೇಳಿ, ಜನರ ಆಕ್ಷೇಪಣೆ ಸಹಿತ ಸರ್ಕಾರಕ್ಕೆ ಕಳಿಸಿಕೊಟ್ಟು, ಸರ್ಕಾರ ಪರಿಶೀಲನೆ ಮಾಡುತ್ತದೆ. ಅದರಮೇಲೆ ಆಖೈರಾದ ತೀರ್ಮಾನವನ್ನು

ಕೈಗೊಂಡ ಮೇಲೆ ಅದು ಸ್ಥಳೀಯ ಸಂಸ್ಥೆಗಳ ಮೇಲೆ ಬೈಂಡಿಂಗ್ ಆಗಿರುತ್ತದೆ. ಯಾವುದೇ ಸ್ಥಳೀಯ ಸಂಸ್ಥೆಯನ್ನು ಕಟ್ಟಿಕೊಂಡು ಅದರ ಅಭಿಪ್ರಾಯಕ್ಕೆ ಅವಕಾಶವಿಲ್ಲದಂತೆ ಎಲ್ಲೂ ಮಾಡಿಲ್ಲ. ಯೋಜನೆ ಮಾಡಿದಾಗಲೂ ಕೂಡ ಸರ್ಕಾರದ ಅನುಮತಿ ದೊರೆಯುವ ಮೊದಲು ಸ್ಥಳೀಯ ಸಂಸ್ಥೆಗಳಿಗೆ ಕಳಿಸಿಕೊಡಬೇಕು. ಸ್ಥಳೀಯ ಸಂಸ್ಥೆಗಳು ಅದರ ವಿಚಾರದಲ್ಲಿ ತಮ್ಮ ಅಭಿಪ್ರಾಯವನ್ನು ಏನು ತಿಳಿಸಬಹುದು. ಆ ಕ್ಲಾಸ್ ಈ ರೀತಿ ಇದೆ.

"...(a) Communicate a copy of such notification to the Local authority concerned which shall within sixty days from the date of receipt thereof, forward to the Board for transmission to the Government as hereinafter provided, any representation which the local authority may think fit to make with regard to the Scheme ;.........

ಅದರ ಮೇಲೆ ಸರ್ಕಾರ ಅಖೈರು ತೀರ್ಮಾನ ಮಾಡುವುದು.

ಶ್ರೀ ಎಲ್. ಶ್ರೀಕಂಠಯ್ಯ.—ಸೆಕ್ಷನ್ 28ರಲ್ಲಿ ಸಮಯ ಬಂದಾಗ ಲೋಕಲ್ ಅಥಾರಿಟಿ ಸೂಪರ್‌ಸೀಡ್ ಮಾಡುವುದಕ್ಕೆ ಅವಕಾಶ ಮಾಡಿಕೊಂಡಿದ್ದೀರಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಶ್ರೀಮಾನ್ ಶ್ರೀಕಂಠಯ್ಯನವರು ಪೊಲಿಟಿಕ್ಸ್ ಪ್ರೊಫೆಸರಾಗಿದ್ದವರು. ಅವರು ಹೇಳುತ್ತಿರುವುದು ಸೆಕ್ಷನ್ 28ರ ಪವರ್ಸ್ ವಿಚಾರ. ಯೋಜನೆ ಮಾಡಿದ ಸಮಯದಲ್ಲಿ, ಯೋಜನೆ ನಡೆಸತಕ್ಕ ಸ್ಥಳದಲ್ಲಿ ಅಧಿಕಾರಬೇಕು. ಆ ಸ್ಥಳದಲ್ಲಿ ಎರಡು ಸಂಸ್ಥೆಗಳು ಅಧಿಕಾರ ನಡೆಸುವುದಕ್ಕಾಗುವುದಿಲ್ಲ. ಸ್ಟ್ರೀಟ್ ರೋಡ್ ಸ್ಕೀಂ ನಡೆಸುವಾಗ ಅದನ್ನು ನಡೆಸುವುದಕ್ಕಾಗುವುದಿಲ್ಲ. ಏಕೆಂದರೆ, ಕಾನೂನು ದೃಷ್ಟಿಯಿಂದ ಅಭಿವೃದ್ಧಿ ಸಮಿತಿಯು ಒಬ್ಬ ವ್ಯಕ್ತಿಗಿಂತ ಹೆಚ್ಚಿನ ಅಧಿಕಾರ ಪಡೆದಿಲ್ಲ. ಸರಿಯಾದ ಅಧಿಕಾರ ಕೊಟ್ಟಿದ್ದಾರ, ಅದನ್ನು ಚಲಾಯಿಸಬೇಕೇ ವಿನಹ ಬೇರೆ ಅಧಿಕಾರ ಚಲಾಯಿಸುವುದಿಲ್ಲ. ಯಾವ ಒಂದು ಯೋಜನೆಯನ್ನಾದರೂ ಕಾರ್ಯಗತ ಮಾಡುತ್ತಿದ್ದ ಸಮಯದಲ್ಲಿ ಅಲ್ಲಿ, ಆ ಸ್ಥಳದಲ್ಲಿ ಅಧಿಕಾರ ಅಗತ್ಯ ಬೇಕಾಗಿರುತ್ತದೆ. ಇನ್ನೊಂದು ಶ್ರೀಕಂಠಯ್ಯನವರು ಹೇಳಿದರು. ನಗರ ಸಭೆಯ ವ್ಯಾಪ್ತಿ ಪೌರಸಭೆಯ ವ್ಯಾಪ್ತಿಗೆ ಮಾತ್ರ ಸೀಮಿತವಾಗಿಲ್ಲ, ಅದನ್ನು ಬಿಟ್ಟು ಹೊರಗಡೆಯೂ ಇದೆ ಎಂದು. ಇವತ್ತು ಎಲ್ಲಾ ಮನೆಗಳನ್ನು ಕಟ್ಟಿದ್ದಾರೆ. ಅಲ್ಲಿ ನೀರಿನ ಸರಬರಾಜು ಮಾಡತಕ್ಕದ್ದು, ಮತ್ತು ರಸ್ತೆಗಳನ್ನು ಸರಿಮಾಡತಕ್ಕದು. ಇವತ್ತು ಪೌರಸಭೆಯ ಸರಹದ್ದನ್ನು ವಿಸ್ತರಿಸಬೇಕಾದರೆ, ಮೊದಲು ಅದಕ್ಕೆ ಶ್ರೀ ಶಾಮಣ್ಣನವರು ಆಕ್ಷೇಪಣೆಯನ್ನು ಮಾಡುವವರು. ಇಲ್ಲಿಯವರ ಮನೋವೃತ್ತಿ ಏನೆಂದರೆ, ಇರತಕ್ಕ ಅನುಕೂಲ ತಮ್ಮೊಳಗೇ ಇರಬೇಕು, ಅದು ವಿಸ್ತಾರವಾಗಬಾರದು. ಆ ಭಾಗದಲ್ಲಿರತಕ್ಕಂತವರು ಬೆಂಗಳೂರಿನಲ್ಲಿ ಸೌಲಭ್ಯಗಳಿಗೆ ಬದ್ಧರಲ್ಲವೆಂದು. Gandhi Bazaar ಬಸವನಗುಡಿಯಲ್ಲಿರತಕ್ಕ ಸೌಲಭ್ಯವನ್ನು ಕೂಡ ಸರ್ಕಾರದ ಖಜಾನೆಯಿಂದ ಖರ್ಚು ಮಾಡಿ, ಮಾಡಿ ಎಂದು ಹೇಳುತ್ತಾರೆ. ಇವತ್ತು ಅನೇಕ ಸ್ಲಮ್ಸ್ ಬೆಳೆದುಕೊಂಡು ಬಂದಿದೆ. ಶ್ರೀಮಾನ್ ಶಾಮಣ್ಣನವರು ಎಷ್ಟೋ ಅರ್ಜಿಗಳನ್ನು ಮಾಡಿದ್ದಾರೆ. ಈ ಊರಿನಲ್ಲಿ ಸ್ಲಮ್ಸ್ ಅದರ ಹುಟ್ಟು ಬೆಳವಣಿಗೆ ಮತ್ತು ರಕ್ಷಣೆ ಹೇಗೆ ನಡೆದಿದೆ ಹಾಗೆ ಬರೆದರೆ, ಮಹಾ ಉಪಕಾರ ಮಾಡಿದ ಹಾಗೆ ಆಗುತ್ತದೆ. ಸ್ಲಮ್ಸ್‌ಗೆ ಮೂಲಭೂತರಾಗಿರತಕ್ಕವರು ಬಹಳ ಜನರು ಇದ್ದಾರೆ. ಆದ್ದರಿಂದ. ಇದನ್ನು ತಪ್ಪಿಸುವುದಕ್ಕೆ ಸೆಕ್ಷನ್ 28ನ್ನು ಮಾಡಲಾಗಿದೆ.—

"Provided that the local authority shall be consulted before making such declaration, if such area or part thereof lies within the limits of the local authority......"

ಲೋಕಲ್ ಅಥಾರಿಟೀಸ್ ಕಮಿಟಿ ಇಲ್ಲವಿದ್ದರೆ; ಹೊರಗಡೆ ಇದ್ದರೆ, ಅವರೇ ಮಾಡಬಹುದು. ಈಗ ಮಾನ್ಯ ಶ್ರೀಕಂಠಯ್ಯನವರು ಏನೂ ದೋಷವಿಲ್ಲವೆಂದು ಒಪ್ಪಿಕೊಳ್ಳಬಹುದು. ಇನ್ನು ಕೆಲವರು ಬೆಟ್ಟರ್‌ಮೆಂಟ್ ಲೇವಿಯ ವಿಚಾರದಲ್ಲಿ ಬಹಳ ಕಟುವಾಗಿ ಟೀಕೆ ಮಾಡಿದರು, ಕೆಲವರು ಡಬಲ್ ಟ್ಯಾಕ್ಸ್ ಆಗುತ್ತದೆಂದು ಹೇಳಿದರು. ಅದು ಹೇಗೆ ಆಗುತ್ತದೆಂದು ನನಗಂತೂ ಅರ್ಥವಾಗಿಲ್ಲ. ಇನ್ನು ಕೆಲವರು ಮಾಡಿದ್ದು ತಪ್ಪು ಎಂದು ಎಲ್ಲಾ ಹೇಳಿದರು. ಇದೇ ಬೆಂಗಳೂರಿನಲ್ಲಿರತಕ್ಕ ಕೃಷ್ಣ ಐಯ್ಯಂಗಾರ್ ರಸ್ತೆಗೆ ಸರ್ಕಾರ ಬೆಟರ್‌ಮೆಂಟ್ ಲೆವಿ ಹಾಕಬೇಕೆಂದು ಆ ಸ್ಕೀಮ್ ಮೊದಲು ಪ್ರಕಟಪಡಿಸಿದಾಗ ಅದಕ್ಕೆ ಬಹಳ ತಕರಾರು ಬಂತು. ಏನಾದರೂ ಒಂದು

(ಶ್ರೀ ಕೆ. ಪುಟ್ಟಸ್ವಾಮಿ)

ಸ್ಕೀಮ್ ಮಾಡಿದ ವೇಳೆಯಲ್ಲಿ ಇಂಥ ಯೋಜನೆಗಳಿಗೆ ಬೆಟ್ಟರ್‌ಮೆಂಟ್ ಲೆವಿ ಹಾಕಬೇಕು. ಇವತ್ತು ಆ ಕೃಷ್ಣ ಐಯ್ಯಂಗಾರ್ ರಸ್ತೆಯಲ್ಲಿರತಕ್ಕಂಥ ಮನೆಗಳ ಬೆಲೆ ಎಷ್ಟು ಪ್ರಮಾಣದಲ್ಲಿ ಹೆಚ್ಚಿದೆ ಎಂದರೆ, 10 ಪಟ್ಟು ಹೆಚ್ಚಿದೆ. ಸಾರ್ವಜನಿಕರ ಹಣ, ಅಥವಾ ಕಾರ್ಪೊರೇಶನ್ ಹಣವನ್ನಾಗಲಿ, ಸಾರ್ವಜನಿಕರಿಗೆ ಸೇರಿದಂತಹ ಯೋಜನೆಯ ಕೆಲಸಗಳಿಗೆ ಖರ್ಚು ಮಾಡಿದಾಗ ಅದರ ಸಂಪೂರ್ಣ ಲಾಭವನ್ನು ಸಂಪೂರ್ಣವಾಗಿ ಅಲ್ಲಿರತಕ್ಕ ಮನೆಯವರು ಪಡೆಯುತ್ತಾರೆ. ಅದರಿಂದ ಅವರಿಗೆ ಅದನ್ನು ಹಾಕುವುದು ತಪ್ಪು ಎಂದು ಕೆಲವರು ಹೇಳಬಹುದು.

ಶ್ರೀಮಾನ್ ಅರಸ್ ಅವರು ಮಾತನಾಡುವಾಗ ಕೃಷ್ಣ ಅಯ್ಯಂಗಾರ್ ರಸ್ತೆಯಲ್ಲಿ ಜಾಗವನ್ನು ಈಗ ಚದುರಗಜ ಒಂದಕ್ಕೆ 1000 ರೂಪಾಯಿಗಳಿಂದ 1500 ರೂಪಾಯಿಗಳವರೆಗೆ ಮಾರುತ್ತಿದ್ದಾರೆ. ಮೊದಲು ಅಲ್ಲಿನ ಬೆಲೆ ಚದುರಗಜ ಒಂದಕ್ಕೆ 50 ಅಥವಾ 100 ರೂಪಾಯಿಗಳಿತ್ತು. ಇಷ್ಟು ಪ್ರಮಾಣದಲ್ಲಿ ಅಲ್ಲಿ ಬೆಲೆ ಹೆಚ್ಚಾಗಬೇಕಾದರೆ ಅಲ್ಲಿ ದೊಡ್ಡ ಒಂದು ರಸ್ತೆಯಾದದ್ದರಿಂದ ಅಲ್ಲವೇ ಎಂದು ಹೇಳಿದರು. ಆದ್ದರಿಂದ ಅದರ ಖರ್ಚಿನಲ್ಲಿ ಸ್ವಲ್ಪ ಭಾಗವನ್ನು ಸರ್ಕಾರದವರು ವಾಪಸ್ಸು ಪಡೆಯುವುದು ಯೋಗ್ಯವಾದೀತೆಂದು ಹೇಳಿದರು.

ಶ್ರೀ ಟಿ. ಆರ್. ಶಾಮಣ್ಣ.—ಹಿಂದೆ ಕೃಷ್ಣ ಅಯ್ಯಂಗಾರ್ ರಸ್ತೆಗೆ 19ಲಕ್ಷ ರೂಪಾಯಿಗಳ ಅಂದಾಜು ಆಗಿತ್ತು. ಈಗ 90 ಲಕ್ಷ ಅಂದಾಜಾಗಿದೆ. ಅದನ್ನು ಹೇಗೆ ವಸೂಲುಮಾಡುತ್ತೀರಿ!

ಶ್ರೀ ಕೆ. ಪುಟ್ಟಸ್ವಾಮಿ.—ಅದನ್ನು ಮಾನ್ಯ ಶ್ರೀ ಶಾಮಣ್ಣನವರೇ ವಸೂಲುಮಾಡಬೇಕಾಗುವುದು. ಆ ರೀತಿ ಮಾಡಿದರೆ ಒಳ್ಳೆಯದು. ಕೃಷ್ಣ ಅಯ್ಯಂಗಾರ್ ರಸ್ತೆ ಮಾಡಬೇಕಾದರೆ, ಕಾರ್ಪೊರೇಷನ್ನಿನವರು 25 ವರ್ಷಗಳ ಕಾಲ ಅಬ್‌ಸ್ಟ್ರಕ್ಟ್ ಮಾಡಿದ್ದರಿಂದ.........

ಶ್ರೀ ಟಿ. ಆರ್. ಶಾಮಣ್ಣ.—ಕಾರ್ಪೊರೇಷನ್ನಿನವರಲ್ಲ. ಕಾಂಗ್ರೆಸ್ಸಿನವರು ಎಂಬುದಾಗಿ ಹೇಳಿ, ಒಪ್ಪಿಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ಅಲ್ಲಿ ಕೆಲವು ಕಾಂಗ್ರೆಸ್ಸಿನವರ ಮನೆಗಳೂ ಸಹ ಇದ್ದುವು.

ಶ್ರೀ ಕೆ. ಪುಟ್ಟಸ್ವಾಮಿ.—ಅದರಲ್ಲಿ ಮೂರನೇ ಒಂದು ಭಾಗ ಸರ್ಕಾರ ಕೊಡುವುದು, ಮೂರನೇ ಒಂದು ಭಾಗ ಕಾರ್ಪೊರೇಷನ್ ಕೊಡುವುದು, ಉಳಿದ ಹಣವನ್ನು ಟ್ರಸ್ಟ್‌ಬೋರ್ಡಿನವರು ಕೊಡುವುದು ಎಂಬುದಾಗಿ ತೀರ್ಮಾನವಾಯಿತು. ಮುಖ್ಯವಾಗಿ ಟ್ರಸ್ಟ್‌ಬೋರ್ಡಿನವರೇ ಈ ಕಾರ್ಯ ತೆಗೆದುಕೊಂಡಿದ್ದು. ಮಾನ್ಯ ಸದಸ್ಯರು 90 ಲಕ್ಷ ರೂಪಾಯಿಗಳು ಆಗುತ್ತದೆಂದು ಎಂದು ಹೇಳಿದ್ದಾರೆ. ನನ್ನ ವರದಿ ಪ್ರಕಾರ 40 ಲಕ್ಷ ರೂಪಾಯಿಗಳನ್ನು ಉಳಿದುದನ್ನು ನಗರಾಭಿವೃದ್ಧಿ ಮಂಡಲಿಯವರು ಕೊಡಬಹುದು. ಅದಕ್ಕಾಗಿ ಬೆಟರ್‌ಮೆಂಟ್ ಲೆವಿ ಇರಬೇಕು ಎಂದು ಹೇಳಿದೆ. ಅದನ್ನು ನೋಡಿ ಕಾನೂನುಪ್ರಕಾರ ಇಂಥಾದನ್ನು ತೆಗೆದುಕೊಂಡು ಮಾಡುವುದು ಅಗತ್ಯವೆಂದು ಕಂಡುಬಂತು. ಅದರಲ್ಲಿಯೂ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ರಸ್ತೆಗಳು ವಿಸ್ತಾರಮಾಡುವುದು ಜರೂರಾಗಿ ಬರುತ್ತದೆ. ಬೆಂಗಳೂರು ನಗರದಲ್ಲಿ ಎಷ್ಟು ದೊಡ್ಡ ರಸ್ತೆಗಳನ್ನು ಮಾಡಿದರೂ ಸಾಲದು ವಾಹನಗಳ ವೇಗ ಹೆಚ್ಚಿದಂತೆಲ್ಲಾ ವಾಹನಗಳ ಬಗ್ಗೆ ಜನರ ಅವಶ್ಯಕತೆ ಹೆಚ್ಚಿದಂತೆಲ್ಲಾ ರಸ್ತೆಗಳನ್ನು ದೊಡ್ಡದು ಮಾಡಬೇಕಾಗುತ್ತದೆ. ಆದ್ದರಿಂದ ರಸ್ತೆಗಳನ್ನು ದೊಡ್ಡದು ಮಾಡುವಾಗ ಬೆಟರ್‌ಮೆಂಟ್ ಲೆವಿ ಹಾಕುವುದು ಬೇಡ, ಯಾರ ಮನೆಯನ್ನೂ ಅಕ್ವೈರ್ ಮಾಡಿಕೊಳ್ಳಬೇಡಿ, ಇನ್ನು ಮುಂದೆ ದೊಡ್ಡ ದೊಡ್ಡ ರಸ್ತೆಗಳನ್ನು ಮಾಡಬೇಡಿ ಎಂದು ಮಾನ್ಯ ಸದಸ್ಯರು ಯಾರೇ ಆಗಲಿ ಹೇಳಿದರೆ ನನಗೆ ಬಹಳ ಸಂತೋಷ. ಇವತ್ತಿನದಿವಸ ಕಾನೂನು ರೀತ್ಯ ಕಾರ್ಪೊರೇಷನ್ ಆಗಲೀ, ಟೌನ್ ಮುನಿಸಿಪಾಲಿಟಿಯಾಗಲೀ ಈ ಕಾರ್ಯ ಮಾಡಬೇಕಾದರೆ ಏನೂ ಅಡ್ಡಿ ಇಲ್ಲ. ಅದಕ್ಕೆ ಬೇಕಾದಂಥ ಕಾನೂನುಗಳನ್ನು ಈಗಾಗಲೇ ಮಾಡಿಕೊಟ್ಟಿದ್ದೇವೆ. ಇನ್ನು ಕೆಲವು ಸದಸ್ಯರು ಈ ಕಾನೂನಿನ ಅವಶ್ಯಕತೆ ಏನಿತ್ತು, ಪೌರಸಭೆಯ ಕಾನೂನುಗಳಲ್ಲಿ ಈ ಅಂಶಗಳೆಲ್ಲವೂ ಅಡಕವಾದಮೇಲೆ ಈ ಕಾನೂನಿನ ಅವಶ್ಯಕತೆ ಆದರೂ ಏನು ಎಂದು ಕೇಳಿದರು. ಆದರೆ ದೊಡ್ಡ ದೊಡ್ಡ ಪಟ್ಟಣಗಳಿಗೆ ಒಂದು ಸುವ್ಯವಸ್ಥಿತವಾದಂಥ ರೀತಿಯಲ್ಲಿ ಇಂಥ ಒಂದು ಸಂಸ್ಥೆ ಇರುವುದು ಅವಶ್ಯಕ, ಅದಕ್ಕೋಸ್ಕರ ಅರ್ಬನ್ ಬೋರ್ಡ್‌ನ್ನು ರಚನೆಮಾಡಲು ಸರ್ಕಾರ ನಿರ್ಧಾರ ಮಾಡಿದರು.

ಶ್ರೀ ಎಲ್. ಶ್ರೀಕಂಠಯ್ಯ.—ಕಾನೂನು ಬೇಡವೆಂದು ನಾವು ಹೇಳುತ್ತಿಲ್ಲ. ಅದನ್ನು ವ್ಯವಸ್ಥಿತ ರೀತಿಯಲ್ಲಿ ಮಾಡಿ ಎಂಬುದಾಗಿ ಹೇಳಿದೆವು. ನಾವು ಹೇಳಿದ್ದು ಡೆವಲಪ್‌ಮೆಂಟ್ ಬೋರ್ಡ್‌ನ್ನು ಎಲ್ಲಾ ಊರುಗಳಿಗೂ ಮಾಡಿ ಎಂದು.

ಶ್ರೀ ಕೆ. ಪುಟ್ಟಸ್ವಾಮಿ.—ಬಹುಶಃ ಹಣಕಾಸಿನ ಸೌಲಭ್ಯ, ಸಿಬ್ಬಂದಿ ಎಲ್ಲಾ ದೊರೆತರೆ ಅಂತಹ ಬೋರ್ಡುಗಳನ್ನು ಎಲ್ಲಾ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರುಗಳಲ್ಲಿಯೂ ಮಾಡಬಹುದು. ದಾವಣಗೆರೆ, ಮಂಗಳೂರು, ಇಂತಹ ಪಟ್ಟಣಗಳಲ್ಲಿಯೂ ಮಾಡಬಹುದು. ಅದರ ಅವಶ್ಯಕತೆ ಇದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ದಾಂಡೇಲಿಯಲ್ಲಿ !

ಶ್ರೀ ಕೆ. ಪುಟ್ಟಸ್ವಾಮಿ.—25 ಸಾವಿರ ಪ್ರಜಾಸಂಖ್ಯೆಗಿಂತ ಕಡಿಮೆ ಇದ್ದರೆ ಮಾಡಬಹುದು ಎಂಬುದಾಗಿ ಒಂದು ನಿರ್ಣಯವನ್ನು ಮಾಡಿಕೊಂಡಿದ್ದೇವೆ. ಅಂದಮೇಲೆ ದಾಂಡೇಲಿಯಲ್ಲಿ ಇಂತಹ ಬೋರ್ಡ್ ಅವಶ್ಯಕ ಆಗಬಹುದು. ಇನ್ನು 15—20 ವರ್ಷಗಳೊಳಗೆ ದಾಂಡೇಲಿ ಮೈಸೂರು ರಾಜ್ಯದಲ್ಲಿ ಒಂದು ಪ್ರಮುಖ ಪಟ್ಟಣವಾಗುವುದರಲ್ಲಿ ಏನೂ ಸಂಶಯವಿಲ್ಲ. ಇಂತಹ ಪಟ್ಟಣದಲ್ಲಿ ಯೋಗ್ಯ ರೀತಿಯಲ್ಲಿ ಬೆಳವಣಿಗೆಯಾಗುವ ಅವಶ್ಯಕತೆ ಇದೆ. ಬೆಳಗಾಮಿಗೂ ಇಂತಹ ಬೋರ್ಡ್ ಆಗಬೇಕೆಂಬ ಸೂಚನೆ ಇದೆ. ಆದರೆ ಅವರಿಗೆ ಬಣ್ಣದ ಕನ್ನಡಕ, ಕಾಮಾಲೆ ಕಣ್ಣು. ಏಕೆಂದರೆ, ನಾವು ಏನು ಮಾಡಿದರೂ ಮರಾಠಿ—ಕನ್ನಡ ಕನ್ನಡ — ಮರಾಠಿ ಎಂಬುದಾಗಿ ಹೇಳುತ್ತಲೇ ಇದ್ದಾರೆ. ಇದರಿಂದ ಬೆಳಗಾಂ ಪ್ರಶ್ನೆ ಇನ್ನೂ ಬಗೆಹರಿದಿಲ್ಲ. ಈಗಲಾದರೂ ಅವರು ಅದನ್ನು ಬಿಡಲಿ.

Sri B. B. SAYANAK (Belgaum).—It is not decided by the Parliament.

ಶ್ರೀ ಕೆ. ಪುಟ್ಟಸ್ವಾಮಿ.—ಅದರಿಂದ ನಾವೂ ಸೇರಿ ಬಾಳಬೇಕಾಗುತ್ತದೆ, ಬದುಕಬೇಕಾಗುತ್ತದೆ. ಮರಾಠಿಯಲ್ಲಿ ಮಾತನಾಡಿದರೆ, ಅಧ್ಯಕ್ಷರಿಗೆ ಗೊತ್ತಾಗುತ್ತದೆ ನನಗಂತೂ ಗೊತ್ತಾಗುವುದಿಲ್ಲ. ಅನೇಕ ಸದಸ್ಯರಿಗೂ ಗೊತ್ತಾಗುವುದಿಲ್ಲ. ಬೆಳಗಾಂ ಪಟ್ಟಣ ನಮ್ಮ ಮೈಸೂರು ರಾಜ್ಯದಲ್ಲಿ ಬಹಳ ಪ್ರಮುಖವಾದಂಥ ಪಟ್ಟಣ : ಎಲ್ಲಾ ಸಣ್ಣಸಣ್ಣ ಕೈಗಾರಿಕೆಗಳು ಅಲ್ಲಿ ಬಹಳ ಹೆಚ್ಚಿನಮಟ್ಟದಲ್ಲಿವೆ. ಅಲ್ಲಿ ಅಲ್ಯೂಮಿನಿಯಂ ಕಾರ್ಖಾನೆ ನಡೆಯುತ್ತಿದೆ. ಎಲ್ಲಕ್ಕಿಂತಲೂ ಹೆಚ್ಚಿಗೆ ಅದು ವಿದ್ಯಾ ಕೇಂದ್ರ. ಅಂತಹ ಪಟ್ಟಣ ಸರಿಯಾದಂಥ ರೀತಿಯಲ್ಲಿ ಬೆಳೆಯಬೇಕು. ಮಾನ್ಯ ಶ್ರೀ ಸಯನಕ್ ಅವರಿಗೆ ಒಂದು ಮಾತನ್ನು ಹೇಳುತ್ತೇನೆ. ಯಾರಾದರೂ ಕೂಡ ಬೆಳಗಾಂ ಪಟ್ಟಣದಲ್ಲಿ ಒಂದು ವ್ಯಾಪಾರ ನಡೆಯುವ ವೇಳೆಯಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಕಾರಿನಲ್ಲಿ ಹೋಗುವುದಕ್ಕೆ ಆಗುವುದಿಲ್ಲ. ಬೆಳಗಾಂ ಪಟ್ಟಣದ ಬಜಾರ್ ರೋಡಿನಲ್ಲಿ ನನಗೇ ಒಂದು ಗಂಟೆಯಾಯಿತು. ಯಾವ ಪೋಲೀಸಿನವರೂ ಜಾಗ ಬಿಡಿಸಿಕೊಡುವುದಕ್ಕಾಗಲಿಲ್ಲ. ಅಷ್ಟು ಇಕ್ಕಟ್ಟಾದ ಪ್ರದೇಶ. ಅದನ್ನು ಬೆಳವಣಿಗೆ ಮಾಡಿಕೊಂಡು ಹೋಗುವುದು ಉಚಿತವೆಂದು ಬೆಳಗಾಂ ಮುನಿಸಿಪಾಲಿಟಿಯವರು ಬಹಳ ಚೆನ್ನಾಗಿ ಕೆಲಸಗಳನ್ನು ನಡೆಯಿಸಿದರು. ಈ ಮುನಿಸಿಪಾಲಿಟಿಯವರು ಈಗ ಬಜಾರ್ ರಸ್ತೆಯನ್ನು ಬಹಳ ಚೆನ್ನಾಗಿ ಇಟ್ಟಿದ್ದಾರೆ. ವಿಸ್ತಾರವಾಗಿ ಮಾಡಿದ್ದಾರೆ.

Sri B. B. SAYANAK.—That is why you have superseded the Belgaum Municipality.

ಶ್ರೀ ಕೆ. ಪುಟ್ಟಸ್ವಾಮಿ.—ನಾವು ಸೂಪರ್‌ಸೀಡ್ ಮಾಡಲಿಲ್ಲ. ಅದರ ಚುನಾವಣೆಯನ್ನು ನಡೆಸುತ್ತಿದ್ದೆವು. ಅಷ್ಟರೊಳಗೆ ಎಮರ್ಜೆನ್ಸಿ ಬಂತು. ಚುನಾವಣೆ ನಿಂತಿತು. ಇದು ಕಾನೂನು ಆಗುವುದು ಅಗತ್ಯ. ಉಳಿದ ವಿಚಾರಗಳ ಕಡೆ ಪ್ರಸ್ತಾಪ ಮಾಡುವುದಿಲ್ಲ. ಸಭಾ ಸದಸ್ಯರು ಒಂದೂವರೆ ಗಂಟೆ ಕಾಲ ಇದಕ್ಕೆ ಮೀಸಲಾಗಿಟ್ಟಿದ್ದರೂ ಸಾವಧಾನವಾಗಿ ಕೇಳಿದ್ದಾರೆ. ನನ್ನ ಉತ್ತರವನ್ನೂ ಸಹ ಅರ್ಧಗಂಟೆ ಕಾಲ ಹೆಚ್ಚಿಗೆ ಕೇಳಿದ್ದಾರೆ. ಆದ್ದರಿಂದ ಮಾನ್ಯ ಸದಸ್ಯರೆಲ್ಲರೂ ಇದಕ್ಕೆ ಸಂಪೂರ್ಣ ಬೆಂಬಲವನ್ನು ಕೊಡಬೇಕೆಂದು ನಾನು ಕೋರುತ್ತೇನೆ.

Mr. SPEAKER.—I will put the motion to vote. The question is :

"That the Mysore Urban Development Boards Bill, 1967, be taken into consideration".

The motion was adopted.

Mr. SPEAKER.—The Minister may move his motion.